

ಕರ್ನಾಟಕ ಸರ್ಕಾರ

ಗಣಿತ

ಅಭ್ಯಾಸ ಸಹಿತ ಪಠ್ಯಪುಸ್ತಕ

(ಪರಿಷ್ಕೃತ)



@KTBS
NOT TO BE REPUBLISHED

ಮೂರನೆಯ ತರಗತಿ

ಭಾಗ – 2

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ¨AU¼ÆgÀ - 560 003

ಭಾಗ – 2

ಪರಿವಿಡಿ

ಕ್ರ.ಸಂ.	ಅಧ್ಯಾಯ	ಪುಟ ಸಂಖ್ಯೆ
6.	ಭಾಗಾಕಾರ	1 – 12
7.	ಮಾನಸಿಕ ಲೆಕ್ಕಾಚಾರ	13 – 25
8.	ಭಿನ್ನರಾಶಿ ಸಂಖ್ಯೆಗಳು	26 – 44
9.	ಹಣ	45 – 67
10.	ಅಳತೆಗಳು – ಉದ್ದ, ತೂಕ, ಕಾಲ	68 – 104
11.	ದತ್ತಾಂಶ ನಿರ್ವಹಣೆ	105 – 114
12.	ನಮೂನೆಗಳು	115 – 140

@KTBS NOT TO BE REPUBLISHED

ಅಧ್ಯಾಯ 6

ಭಾಗಾಕಾರ

T2P9I4

ಈ ಅಧ್ಯಾಯವನ್ನು ಕಲಿತ ನಂತರ ನೀನು,

* ಸಮನಾಗಿ ಹಂಚುವುದು ಮತ್ತು ಗುಂಪು ಮಾಡುವುದರ ಮೂಲಕ ಭಾಗಾಕಾರದ ಅರ್ಥ ತಿಳಿಯುವೆ,
* ಗುಣಾಕಾರದೊಂದಿಗೆ ಭಾಗಾಕಾರದ ಸಂಬಂಧವನ್ನು ತಿಳಿಯುವೆ,
* ಭಾಗಾಕಾರದ ನಿಜಾಂಶಗಳನ್ನು ತಿಳಿಯುವೆ
  – ಗುಂಪು ಮಾಡುವುದರ ಮೂಲಕ.
  – ಗುಣಾಕಾರದ ಮಗ್ಗಿ ಬಳಸುವುದರ ಮೂಲಕ.

© KTBS NOT TO BE REPUBLISHED

ಸಮನಾಗಿ ಹಂಚುವುದು ಮತ್ತು ಗುಂಪು ಮಾಡುವುದು

1. ರಾಜುವಿಗೆ ಅನಾರೋಗ್ಯದ ಕಾರಣ ಡಾಕ್ಟರ್‌ರ ಬಳಿ ಹೋದನು. ಡಾಕ್ಟರ್ ಇವನನ್ನು ಪರೀಕ್ಷಿಸಿ, ಎಂಟು ಮಾತ್ರೆಗಳನ್ನು ಕೊಟ್ಟು, ಅವುಗಳನ್ನು ದಿನಕ್ಕೆ ಎರಡರಂತೆ ತೆಗೆದುಕೊಳ್ಳಲು ತಿಳಿಸಿದರು.

ಹಾಗಾದರೆ ರಾಜು ಆ ಎಂಟು ಮಾತ್ರೆಗಳನ್ನು ಎಷ್ಟು ದಿನ ತೆಗೆದುಕೊಳ್ಳುತ್ತಾನೆ ?

ಮೊದಲನೇ ದಿನ ತೆಗೆದುಕೊಂಡ ಮಾತ್ರೆಗಳು = 

ಎರಡನೇ ದಿನ ತೆಗೆದುಕೊಂಡ ಮಾತ್ರೆಗಳು = 


ಮೂರನೇ ದಿನ ತೆಗೆದುಕೊಂಡ ಮಾತ್ರೆಗಳು = 

ನಾಲ್ಕನೇ ದಿನ ತೆಗೆದುಕೊಂಡ ಮಾತ್ರೆಗಳು = 

```
 8
-2
 6
 6
-2
 4
 4
-2
 2
 2
-2
 0
```

ಆದ್ದರಿಂದ ರಾಜು ಎಂಟು ಮಾತ್ರೆಗಳನ್ನು 4 ದಿನಗಳು ತೆಗೆದುಕೊಳ್ಳುತ್ತಾನೆ.

∴ 8ನ್ನು 2ರ 4 ಗುಂಪುಗಳನ್ನಾಗಿ ಮಾಡಬಹುದು.



2ರ 4 ಗುಂಪು 8 ಆಗುತ್ತದೆ

2. ಲತಾಳ ಬಳಿ 12 ಬಲೂನ್‌ಗಳಿವೆ. ಅವುಗಳನ್ನು ಸಮನಾಗಿ ಅವಳ 4 ಜನ ಗೆಳತಿಯರಿಗೆ ಹಂಚಿದಳು. ಹಾಗಾದರೆ ಒಬ್ಬೊಬ್ಬರಿಗೆ ಎಷ್ಟು ಬಲೂನ್‌ಗಳು ಸಿಗುತ್ತವೆ ?



ಮೊದಲಿಗೆ ಲತಾ ತನ್ನ 4 ಜನ ಗೆಳತಿಯರಿಗೆ ಒಂದೊಂದು ಬಲೂನ್ ಹಂಚಿದಳು.

$$\begin{array}{r} 12 \\ -4 \\ \hline 8 \end{array}$$



ನಂತರ ಒಬ್ಬೊಬ್ಬರಿಗೂ ಇನ್ನೊಂದು ಬಲೂನ್ ಹಂಚಿದಳು.

$$\begin{array}{r} 8 \\ -4 \\ \hline 4 \end{array}$$



ಉಳಿದ 4 ನ್ನು ಎಲ್ಲರಿಗೂ ಒಂದರಂತೆ ಹಂಚಿದಳು.

$$\begin{array}{r} 4 \\ -4 \\ \hline 0 \end{array}$$



∴ 12 ಬಲೂನ್‌ಗಳನ್ನು ಒಬ್ಬೊಬ್ಬರಿಗೆ 3 ರಂತೆ 4 ಜನರಿಗೆ ಹಂಚಿದಳು.

∴ 12 ನ್ನು 3ರ 4 ಗುಂಪುಗಳನ್ನಾಗಿ ಮಾಡಲಾಗಿದೆ.

∴ **ಅಂದರೆ 12÷4=3**

$$\begin{array}{r} 3 \\ 4\overline{)12} \\ 12 \\ \hline 00 \\ \hline \end{array}$$

ಭಾಗಾಕಾರವು ವ್ಯವಕಲನದ ಸುಲಭರೂಪ

÷ಭಾಗಾಕಾರದ ಚಿಹ್ನೆ

"ಸಮನಾಗಿ ಹಂಚುವುದು ಅಥವಾ ಗುಂಪು ಮಾಡುವ ವಿಧಾನವನ್ನು **ಭಾಗಾಕಾರ** ಎನ್ನುತ್ತಾರೆ"


@KTBS NOT TO BE REPUBLISHED

ಅಭ್ಯಾಸ 6.1

1. ಚಿತ್ರದಲ್ಲಿರುವ 12 ಚೆಂಡುಗಳನ್ನು 3ರ ಗುಂಪುಗಳನ್ನಾಗಿ ಮಾಡು.




2. ಚಿತ್ರದಲ್ಲಿರುವ ಮೀನುಗಳನ್ನು 4ರ ಗುಂಪುಗಳಾಗಿ ಮಾಡು.



3. ಚಿತ್ರದಲ್ಲಿರುವ ಪ್ರಾಣಿಗಳ ಮುಖಗಳನ್ನು 2ರ ಗುಂಪುಗಳಾಗಿ ಮಾಡು.



4. ಚಿತ್ರದಲ್ಲಿರುವ ಗೋಲಿಗಳನ್ನು 5ರ ಗುಂಪುಗಳಾಗಿ ಮಾಡು.




5. ಚಿತ್ರದಲ್ಲಿರುವ ಲಾಲಿಪಾಪ್‌ಗಳನ್ನು 6ರ ಗುಂಪುಗಳಾಗಿ ಮಾಡು.




© KTBS NOT TO BE REPUBLISHED

II. ಒಂದೊಂದು ದಾರದಲ್ಲೂ ಸಮನಾದ ಮಣಿಗಳು ಇರುವಂತೆ, ಕೊಟ್ಟಿರುವ ಮಣಿಗಳನ್ನು ದಾರಕ್ಕೆ ಪೋಣಿಸು.

ಮಾದರಿ : 9 ಮಣಿಗಳನ್ನು 3 ದಾರಗಳಿಗೆ ಪೋಣಿಸು.







1. 20 ಮಣಿಗಳನ್ನು 5 ದಾರಗಳಿಗೆ ಪೋಣಿಸು.




2. 24 ಮಣಿಗಳನ್ನು 4 ದಾರಗಳಿಗೆ ಪೋಣಿಸು.



3. 36 ಮಣಿಗಳನ್ನು 6 ದಾರಗಳಿಗೆ ಪೋಣಿಸು.




4. 14 ಮಣಿಗಳನ್ನು 2 ದಾರಗಳಿಗೆ ಪೋಣಿಸು




@KTBS NOT TO BE REPUBLISHED

ಭಾಗಾಕಾರ ಮತ್ತು ಗುಣಾಕಾರಗಳ ಸಂಬಂಧ

3 ಸಲ 4, 12 ಆಗುತ್ತದೆ.
4x3=12



12 ಹೂಗಳನ್ನು 4ರ 3 ಗುಂಪುಗಳಾಗಿ ಮಾಡಬಹುದು. 12÷4=3



$$\begin{array}{r} 4\,)\,12\,(3 \\ 12 \\ \hline 00 \\ \hline \end{array}$$

@KTBS NOT TO BE REPUBLISHED

ಗುಣಾಕಾರ ರೂಪ		ಭಾಗಾಕಾರ ರೂಪ
4 X 3 = 12	⟶	12 X 4=3
3 X 4 = 12	⟶	12 X 3=4

ಪ್ರತಿಯೊಂದು ಗುಣಾಕಾರ ರೂಪಕ್ಕೆ ಅನುಗುಣವಾದ ಭಾಗಾಕಾರ ರೂಪ ಇರುತ್ತದೆ.

ಗುಣಾಕಾರ ಮತ್ತು ಭಾಗಾಕಾರ ಒಂದಕ್ಕೊಂದು ಸಂಬಂಧಿಸಿದೆ.

ಉದಾ :

1. 6 X 2 = 12 → 12÷2=6, 12÷6=2
2. 4 X 7 = 28 → 28÷7=4, 28÷4=7
3. 8 X 3 = 24 → 24÷3=8, 24÷8=3

ಅಭ್ಯಾಸ 6.2

I. ಬಿಟ್ಟ ಸ್ಥಳ ತುಂಬು.

1. 7X3=21 ಆದರೆ, 21 ÷ 3 = ...

2. 9X6=54 ಆದರೆ, 54 ÷ 6 = ...

3. 5X8=40 ಆದರೆ, 40 ÷ ..... = 5

4. 5X2=10 ಆದರೆ, 10 ÷ 2 = ...

5. 3X6=18 ಆದರೆ, ...÷ 6 = 3

6. 7X9=63 ಆದರೆ, 63 ÷ ..... = 7

II.ಕೊಟ್ಟಿರುವ ಭಾಗಾಕಾರ ರೂಪವನ್ನು ಅದರ ಗುಣಾಕಾರ ರೂಪಕ್ಕೆ ಗೆರೆ ಎಳೆದು ಹೊಂದಿಸು.

ಅ	ಆ
1) 8 ÷ 2 = 4	5 X 3 = 15
2) 20 ÷ 4 = 5	9 X 3 = 27
3) 18 ÷ 2 = 9	4 X 2 = 8
4) 15 ÷ 3 = 5	5 X 4 = 20
5) 27 ÷ 3 = 9	8 X 2 = 16
6) 16 ÷ 2 = 8	9 X 2 = 18

III. ಕೊಟ್ಟಿರುವ ಗುಣಾಕಾರ ರೂಪಕ್ಕೆ ಅನುಗುಣವಾದ ಭಾಗಾಕಾರ ರೂಪ ಬರೆ.

1. 8 X 4 = 32 → 32÷4=8, 32÷8=4

2. 9 X 8 = 72 →

@KTBS NOT TO BE REPUBLISHED

3. $7 \times 6 = 42$

4. $8 \times 7 = 56$

5. $10 \times 5 = 50$


ಗುಂಪು ಮಾಡಿ ಭಾಗಿಸು.

ಅಕ್ಬರನ ಬಳಿ 12 ಪೆನ್ನುಗಳಿವೆ. ಅವನು ಅವುಗಳನ್ನು ಸಮನಾಗಿ 4 ಪೆನ್ ಸ್ಟ್ಯಾಂಡ್‌ಗಳಲ್ಲಿ ಹಾಕುತ್ತಾನೆ. ಅವನಿಗೆ ಸಹಾಯ ಮಾಡು.

ಮೊದಲಿಗೆ ಒಂದೊಂದು ಪೆನ್ ಸ್ಟ್ಯಾಂಡ್‌ನಲ್ಲಿ ಒಂದೊಂದು ಪೆನ್ನು ಹಾಕು.



ನಂತರ ಒಂದೊಂದಕ್ಕೂ ಇನ್ನೊಂದು ಪೆನ್ನು ಹಾಕು.



ಉಳಿದ 4 ನ್ನು ಪ್ರತಿಯೊಂದಕ್ಕೂ ಒಂದರಂತೆ ಹಾಕು.



ಹಾಗಾದರೆ 12 ನ್ನು 3ರ 4 ಗುಂಪುಗಳಾಗಿ ಮಾಡಬಹುದು.

$$\therefore 12 \div 4 = 3$$

© TBS NOT TO BE REPUBLISHED

ಮಗ್ಗಿ ಬಳಸಿ ಭಾಗಿಸು

ಗುಣಾಕಾರದ ಮಗ್ಗಿ ಬಳಸಿ ಕೂಡ ಭಾಗಾಕಾರ ಮಾಡಬಹುದು.

ಉದಾ : 1 12 ÷ 4

4 ಮೂರುಗಳು 12ಕ್ಕೆ ಸಮ 4 X 3 = 12

∴ 12 ÷ 4 = 3

ಭಾಜ್ಯ

ಭಾಜಕ 4) 1 2 (3 ಭಾಗಲಬ್ಧ

1 2

0 0 ಶೇಷ

ಉದಾ: 2

45 ÷ 5

5 ಒಂಬತ್ತುಗಳು 45 ಕ್ಕೆ ಸಮ = 5 X 9 = 45

∴ 45÷ 5 = 9

45 ÷ 5 = 9

↓ ↓ ↓

ಭಾಜ್ಯ ಭಾಜಕ ಭಾಗಲಬ್ಧ

ಭಾಜ್ಯ

ಭಾಜಕ 5) 4 5 (9 ಭಾಗಲಬ್ಧ

4 5

0 0 ಶೇಷ

∴ ಭಾಜ್ಯ ÷ ಭಾಜಕ = ಭಾಗಲಬ್ಧ

ಅಥವಾ

ಭಾಜಕ) ಭಾಜ್ಯ (ಭಾಗಲಬ್ಧ

ಉದಾ : 3

28 ÷ 7

7 ನಾಲ್ಕುಗಳು 28 ಕ್ಕೆ ಸಮ.

∴ 28 ÷ 7 = 4

ಭಾಜ್ಯ

ಭಾಜಕ 7) 2 8 (4 ಭಾಗಲಬ್ಧ

2 8

0 0 ಶೇಷ

* ಯಾವುದೇ ಸಂಖ್ಯೆಯನ್ನು 1ರಿಂದ ಭಾಗಿಸಿದಾಗ ಭಾಗಲಬ್ಧ ಅದೇ ಸಂಖ್ಯೆ ಆಗಿರುತ್ತದೆ.

ಉದಾ : 3 ÷ 1 = 3, 4 ÷ 1 = 4, 5 ÷ 1 = 5

* ಯಾವುದೇ ಸಂಖ್ಯೆಯನ್ನು ಸೊನ್ನೆ ಹೊರತುಪಡಿಸಿ ಅದೇ ಸಂಖ್ಯೆಯಿಂದ ಭಾಗಿಸಿದಾಗ ಭಾಗಲಬ್ಧ 1 ಆಗಿರುತ್ತದೆ.


ಉದಾ : 3 ÷ 3 = 1, 4 ÷ 4 = 1, 5 ÷ 5 = 1

@KTBS NOT TO BE REPUBLISHED

ಅಭ್ಯಾಸ 6.3

I. ಕೊಟ್ಟಿರುವ ವಸ್ತುಗಳನ್ನು ಗುಂಪು ಮಾಡಿ ಅದರ ಭಾಗಾಕಾರ ರೂಪ ಬರೆ.

1. ಒಟ್ಟು ಮೊಟ್ಟೆಗಳು = 16




ಪ್ರತಿಯೊಂದು ಗುಂಪಿನಲ್ಲಿರುವ ಮೊಟ್ಟೆಗಳು =4

∴ ಒಟ್ಟು ಗುಂಪುಗಳು = 4

16 ÷ 4 = 4

2. ಒಟ್ಟು ಸೇಬುಗಳು = 30



ಪ್ರತಿಯೊಂದು ಗುಂಪಿನಲ್ಲಿರುವ ಸೇಬುಗಳು = 6

∴ ಒಟ್ಟು ಸೇಬುಗಳ ಗುಂಪುಗಳು = ...

.....

3. ಒಟ್ಟು ಕೊಡಗಳು (ಬಿಂದಿಗೆಗಳು) = 9



ಪ್ರತಿಯೊಂದು ಗುಂಪಿನಲ್ಲಿರುವ ಬಿಂದಿಗೆಗಳು = 3

∴ ಒಟ್ಟು ಗುಂಪುಗಳು = ...

.....

4. ಒಟ್ಟು ಮೇಣದ ಬತ್ತಿಗಳು = 40



ಪ್ರತಿಯೊಂದು ಗುಂಪಿನಲ್ಲಿರುವ ಮೇಣದ ಬತ್ತಿಗಳು = 5

ಒಟ್ಟು ಗುಂಪುಗಳು .....

.....


@KTBS NOT TO BE REPUBLISHED

5. ಒಟ್ಟು ಬುಗುರಿಗಳು = 18

ಪ್ರತಿಯೊಂದು ಗುಂಪಿನಲ್ಲಿರುವ ಬುಗುರಿಗಳು = 2

ಒಟ್ಟು ಗುಂಪುಗಳು .....

.....




II. ಗುಣಾಕಾರದ ಮಗ್ಗಿ ಬಳಸಿ ಭಾಗಾಕಾರ ರೂಪ ಬರೆ.

1. 16 ಹುಡುಗಿಯರಿದ್ದಾರೆ. ಇಬ್ಬರು ಹುಡುಗಿಯರು ಸೇರಿಒಂದು ತಂಡ. ಅಂತಹ ಎಷ್ಟು ತಂಡಗಳಿವೆ ?

$$2\overline{)16}\,(8$$
$$16$$
$$\overline{00}$$

16 ÷ 2 = 8 ಉತ್ತರ : 8 ತಂಡಗಳು



2. 18 ಮರಗಳು,

3 ಸಾಲುಗಳಲ್ಲಿವೆ.

ಪ್ರತಿಯೊಂದು ಸಾಲಿನಲ್ಲಿರುವ ಮರಗಳು ಎಷ್ಟು ? ..... ಉತ್ತರ .....



3.36 ಚಾಕಲೇಟ್‌ಗಳಿವೆ.

ಒಬ್ಬನಿಗೆ 4 ಚಾಕಲೇಟ್‌ಗಳು ದೊರೆತರೆ,

ಒಟ್ಟು ಹುಡುಗರ ಸಂಖ್ಯೆ ಎಷ್ಟು ?

..... ಉತ್ತರ .....




4. 10 ಬ್ರೆಡ್ಡಿನ ತುಂಡುಗಳು ಇವೆ.

ಒಂದು ಸ್ಯಾಂಡ್‌ವಿಚ್ ಸಿದ್ಧ ಪಡಿಸಲು 2 ತುಂಡುಗಳು ಬೇಕು.

∴ ಒಟ್ಟು ಎಷ್ಟು ಸ್ಯಾಂಡ್‌ವಿಚ್‌ಗಳನ್ನು ಸಿದ್ಧಪಡಿಸಬಹುದು ?

..... ಉತ್ತರ .....



© KTBS NOT TO BE REPUBLISHED

5. 64 ಸೈನಿಕರಿದ್ದಾರೆ.


ಪ್ರತಿಯೊಂದು ಸಾಲಿನಲ್ಲಿ 8 ಸೈನಿಕರು ಇದ್ದಾರೆ.

ಒಟ್ಟು ಸಾಲುಗಳ ಸಂಖ್ಯೆ ಎಷ್ಟು ?

..... ಉತ್ತರ .....



III. ಮುಂದಿನ ಪುಟದಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು ಭಾಗಿಸಿ ಈ ಚಿತ್ರದಲ್ಲಿರುವ ಉತ್ತರಕ್ಕೆ ಒಂದೇ ಬಣ್ಣ ಹಾಕು.



@KTBS NOT TO BE REPUBLISHED

1. 6 ÷ 2

2. 60 ÷10

3. 49 ÷ 7

4. 8÷ 8

5. 20÷ 5

6. 18 ÷ 9

7. 5 ÷ 1

8. 30 ÷ 3

9. 81 ÷ 9

10. 72 ÷ 9

@KTBS
NOT TO BE REPUBLISHED

*****

ಅಧ್ಯಾಯ 7

ಮಾನಸಿಕ ಲೆಕ್ಕಾಚಾರ

W2M4U1

ಈ ಅಧ್ಯಾಯವನ್ನು ಕಲಿತ ನಂತರ ನೀನು,

* ಒಂದಂಕಿಯ ಮತ್ತು ಎರಡಂಕಿಯ ಸಂಖ್ಯೆಗಳನ್ನು ಮನಸ್ಸಿನಲ್ಲಿಯೇ ಕೂಡುವೆ ಮತ್ತು ಕಳೆಯುವೆ,
* ಎರಡಂಕಿಯ ಸಂಖ್ಯೆಗಳನ್ನು ಮನಸ್ಸಿನಲ್ಲಿಯೇ ದ್ವಿಗುಣಗೊಳಿಸುವೆ. (ಎರಡಂಕಿಯ ಸಂಖ್ಯೆ ಮೀರದಂತೆ)

ಮಾಯಾ ಚೌಕದಾಟ :

ಚಟುವಟಿಕೆ 1 :






2	+	4	+	2
+				+
5		8		3
+				+
1	+	4	+	3

2 + 4 + 2 = 8
2 + 5 + 1 = 8
1 + 4 + 3 = 8
2 + 3 + 3 = 8

© KTBS NOT TO BE REPUBLISHED



ಚಟುವಟಿಕೆ 2




2	+	3	+	5
+				+
		10		
+				+
	+		+	

2 + 3 + 5 = 10
__ + __ + __ = 10
__ + __ + __ = 10
__ + __ + __ = 10

ಚಟುವಟಿಕೆ 3

ಚಟುವಟಿಕೆ 3



ಜಾನ್, ರಾಧಾ, ಗೌರಿ, ಪ್ರಕಾಶ ಮತ್ತು ಜ್ಯೋತಿ ಇವರು ಹುಣಸೆಮರದ ಕೆಳಗೆ ಬಿದ್ದಿರುವ ಹುಣಸೆಬೀಜಗಳನ್ನು ಸಂಗ್ರಹಿಸಿ ಚೀಲದಲ್ಲಿಟ್ಟುಕೊಂಡಿದ್ದಾರೆ. ಇವರ ಬಳಿ ಇರುವ ಹುಣಸೆಬೀಜಗಳ ಸಂಖ್ಯೆಯನ್ನು ಗಮನಿಸು. ಮನಸ್ಸಿನಲ್ಲಿ ಕೂಡಿ ಉತ್ತರಿಸು.

* ಜಾನ್ ಮತ್ತು ರಾಧಾ ಇವರಿಬ್ಬರ ಹತ್ತಿರ ಇರುವ ಒಟ್ಟು ಹುಣಸೆಬೀಜಗಳು = 38. ಸರಿಯೇ ಅಥವಾ ತಪ್ಪೇ ತಿಳಿಸು. _____

* ಗೌರಿ ಮತ್ತು ಪ್ರಕಾಶ ಇವರಿಬ್ಬರ ಹತ್ತಿರ ಇರುವ ಒಟ್ಟು ಹುಣಸೆಬೀಜಗಳೆಷ್ಟು ?
_____

* ಜ್ಯೋತಿಗಿಂತ ರಾಧಾಳ ಹತ್ತಿರ ಎಷ್ಟು ಹೆಚ್ಚು ಹುಣಸೆಬೀಜಗಳಿವೆ ?
_____

* ಗೌರಿ ಮತ್ತು ಜಾನ್ ಹತ್ತಿರ ಇರುವ ಹುಣಸೆ ಬೀಜಗಳ ಸಂಖ್ಯೆ ಸಮವಾಗಬೇಕಾದರೆ ಜಾನ್ ಇನ್ನೂ 7 ಹುಣಸೆ ಬೀಜಗಳನ್ನು ಸಂಗ್ರಹಿಸಬೇಕು. ಸರಿಯೇ ಅಥವಾ ತಪ್ಪೇ ತಿಳಿಸು. _____

* ರಾಧಾ ಮತ್ತು ಜ್ಯೋತಿ ಇವರಿಬ್ಬರ ಹತ್ತಿರ ಇರುವ ಹುಣಸೆಬೀಜಗಳ ಸಂಖ್ಯೆ ಸಮವಾಗಬೇಕಾದರೆ ಜ್ಯೋತಿ ಇನ್ನೂ ಎಷ್ಟು ಹುಣಸೆಬೀಜಗಳನ್ನು ಸಂಗ್ರಹಿಸಬೇಕು ? _____

* ಪ್ರಕಾಶ ಮತ್ತು ಗೌರಿ ಇವರಿಬ್ಬರ ಹತ್ತಿರ ಇರುವ ಒಟ್ಟು ಹುಣಸೆ ಬೀಜಗಳು 60. ಗೌರಿಯ ಬಳಿ 24 ಹುಣಸೆ ಬೀಜಗಳಿದ್ದರೆ, ಪ್ರಕಾಶನ ಹತ್ತಿರ ಇರುವ ಹುಣಸೆಬೀಜಗಳೆಷ್ಟು ? _____

© KTBS NOT TO BE REPUBLISHED

ನೂರನ್ನು ಮುಟ್ಟುವ ಆಟ.

ಆಶಾ



ಪ್ರಾರಂಭದಲ್ಲಿ
1 ರಿಂದ 9ರ ಒಳಗಿನ
ಯಾವ ಅಂಕಿ ಹೇಳಲಿ
ನನ್ನ ಅಂಕಿ 9

ಅಶೋಕ



9ಕ್ಕೆ 7 ಕೂಡುತ್ತೇನೆ
16 ಆಗುತ್ತದೆ
9+7=16



16ಕ್ಕೆ 4 ಕೂಡುತ್ತೇನೆ
20 ಆಗುತ್ತದೆ.
16+4=20



20 ಕ್ಕೆ 5 ಕೂಡುತ್ತೇನೆ
25 ಆಗುತ್ತದೆ
20+5=25



25ಕ್ಕೆ 6 ಕೂಡುತ್ತೇನೆ
31 ಆಗುತ್ತದೆ.
25+6=31



31 ಕ್ಕೆ 8 ಕೂಡುತ್ತೇನೆ
39 ಆಗುತ್ತದೆ
31+8=39

@KTBS
NOT TO BE REPUBLISHED



39 ಕ್ಕೆ 1 ಕೂಡುತ್ತೇನೆ
40 ಆಗುತ್ತದೆ.
39+1=40

ಅಶೋಕ



40ಕ್ಕೆ 3 ಕೂಡುತ್ತೇನೆ
43 ಆಗುತ್ತದೆ
40+3=43



43ಕ್ಕೆ 7 ಕೂಡುತ್ತೇನೆ
50 ಆಗುತ್ತದೆ
43+7=50



50 ಕ್ಕೆ 8 ಕೂಡುತ್ತೇನೆ
58 ಆಗುತ್ತದೆ
50+8=58

@KTBS
NOT TO BE REPUBLISHED

ಹೀಗೆ ಒಬ್ಬರು ಹೇಳಿದ ಸಂಖ್ಯೆಗೆ ಇನ್ನೊಬ್ಬರು 1 ರಿಂದ 9ರ ಒಳಗಿನ ಅಂಕಿಯನ್ನು ಕೂಡುತ್ತಾ ಮೊತ್ತ 100 ಮುಟ್ಟುವವರೆಗೆ ಆಟವನ್ನು ಮುಂದುವರಿಸಬೇಕು. ಈ ಆಟವನ್ನು ಇಬ್ಬರು ವಿದ್ಯಾರ್ಥಿಗಳು ಇಲ್ಲವೆ ಎರಡು ತಂಡಗಳಲ್ಲಿ ಆಡಬಹುದು. ಮೊದಲು 100 ಮುಟ್ಟುವ ವಿದ್ಯಾರ್ಥಿ ಆಟದಲ್ಲಿ ಗೆದ್ದಂತಾಗುವುದು.

ಮನಸ್ಸಿನಲ್ಲಿ ಲೆಕ್ಕ ಮಾಡಿ ಸರಿ, ತಪ್ಪು ಗುರುತಿಸಿ ಬರೆ.

1) 10 + 10 = 20 + 5 = 25 + 6 = 31 .....

2) 50 - 5 = 45 - 10 = 35 - 4 = 30 .....

3) 25 + 3 = 28 + 4 = 32 + 5 = 39 .....

4) 60 - 3 = 57 - 5 = 52 - 6 = 46 .....

5) 40 + 9 = 49 + 8 = 57 + 7 = 64 .....

ಮನಸ್ಸಿನಲ್ಲಿ ಲೆಕ್ಕ ಮಾಡಿ, ಬಿಟ್ಟ ಸ್ಥಳಗಳನ್ನು ತುಂಬು.

1)  +  = 52

2)  +  = ☐

3)  -  = ☐

4)  -  = ☐

5)  +  = ☐

ಮಾದರಿಯಂತೆ ಬಿಟ್ಟ ಸ್ಥಳ ತುಂಬು.

1) ಮೂವತ್ತು – ಐದು = ಇಪ್ಪತ್ತೈದು

2) ನಲವತ್ತು + ಎಂಟು = _____

3) ಐವತ್ತೊಂಬತ್ತು + ಏಳು = ಅರವತ್ತಾರು

4) ಐವತ್ತೊಂಬತ್ತು – ಒಂಬತ್ತು = _____

5) ತೊಂಬತ್ತು + ಒಂಬತ್ತು = ತೊಂಬತ್ತೊಂಬತ್ತು

6) ಹದಿನೈದು + ಹತ್ತು = _____

7) ಇಪ್ಪತ್ತು + ಹದಿನೇಳು = _____

8) ನಲವತ್ತೈದು – ಹದಿನೈದು = ಮೂವತ್ತು

9) ಎಪ್ಪತ್ತೇಳು – ಹದಿನೇಳು = _____

10) ಅರವತ್ತನಾಲ್ಕು + ಹದಿನೈದು = ಎಪ್ಪತ್ತೊಂಬತ್ತು

@KTBS NOT TO BE REPUBLISHED

ಅಭ್ಯಾಸ 7.1

I. ಮನಸ್ಸಿನಲ್ಲಿ ಲೆಕ್ಕ ಮಾಡು. ಮಾದರಿಯಂತೆ ಸರಿ ಇದ್ದರೆ ಮತ್ತು ✓ ತಪ್ಪು ಇದ್ದರೆ x ಗುರುತು ಹಾಕು.

1) 10 + 5 = 15 ☑ 2) 12 + 7 = 20 ☒

3) 18 + 10 = 28 ☐ 4) 15 + 19= 24 ☐

5) 20 – 15 = 15 ☐ 6) 20 – 6 = 4 ☐

7) 18 – 7 = 12 ☐ 8) 35 – 9 = 26 ☐

9) 40 – 30 = 10 ☐ 10) 29– 5 = 24 ☐

11) 32 + 18 = 48 ☐ 12) 38+ 8 = 56 ☐

13) 50– 32 = 28 ☐ 14) 42– 12 = 20 ☐

15) 25+ 35 = 60 ☐ 16) 59+ 7 = 66 ☐

II. ಮನಸ್ಸಿನಲ್ಲಿ ಲೆಕ್ಕ ಮಾಡು. ಮಾದರಿಯಂತೆ ಸರಿ ಇದ್ದರೆ ✓ ಮತ್ತು ತಪ್ಪು ಇದ್ದರೆ x ಗುರುತು ಹಾಕು.

1) ಹದಿನೈದು + ಒಂಬತ್ತು = ಇಪ್ಪತ್ತನಾಲ್ಕು ☑

2) ಇಪ್ಪತ್ತು – ಎಂಟು = ಹತ್ತು ☐

3) ಹದಿನೈದು – ಹತ್ತು = ಐದು ☐

4) ಇಪ್ಪತ್ತನಾಲ್ಕು+ ಹದಿನಾರು = ಐವತ್ತು ☐

5) ನಲವತ್ತೈದು– ಇಪ್ಪತ್ತೈದು = ಇಪ್ಪತ್ತು ☐

III. ಮನಸ್ಸಿನಲ್ಲಿ ಲೆಕ್ಕ ಮಾಡಿ ಉತ್ತರ ಬರೆ.

1) ಒಂಬತ್ತು + ಹನ್ನೆರಡು = ಇಪ್ಪತ್ತೊಂದು.

2) ಹನ್ನೊಂದು + ಹದಿಮೂರು = ...

3) ಇಪ್ಪತ್ತನಾಲ್ಕು – ಎಂಟು = ...

@KTBS NOT TO BE REPUBLISHED

4) ಅರವತ್ತೆರಡು + ಹದಿನೈದು = ...

5) ಮೂವತ್ತೊಂದು – ಹತ್ತು = ...

IV. ಮನಸ್ಸಿನಲ್ಲಿ ಲೆಕ್ಕ ಮಾಡಿ, ಗೆರೆ ಎಳೆದು ಹೊಂದಿಸು.

	'ಅ' ಪಟ್ಟಿ	'ಬ' ಪಟ್ಟಿ
1)	20 – 14	66
2)	ಹದಿನೆಂಟು + ಹನ್ನೆರಡು	80
3)	ನಲವತ್ತೈದು + ಮೂವತ್ತೈದು	06
4)	29 + 7	30
5)	ತೊಂಬತ್ತು – ಇಪ್ಪತ್ತನಾಲ್ಕು	25
		36

V. ಮನಸ್ಸಿನಲ್ಲಿ ಲೆಕ್ಕ ಮಾಡಿ ಉತ್ತರ ಬರೆ.

1) 10 + 8 = ☐ 2) 20 – 7 = ☐

3) 15 – 7 = ☐ 4) 38 + 7 = ☐

5) 18 + 9 = ☐ 6) 40 – 6 = ☐

7) 25 – 6 = ☐ 8) 39 + 8 = ☐

9) 42 + 8 = ☐ 10) 27 – 8 = ☐

VI. ಮನಸ್ಸಿನಲ್ಲಿಯೆ ಲೆಕ್ಕ ಮಾಡಿ ಉತ್ತರ ಬರೆ.

1) ನಿನ್ನ ಹತ್ತಿರ 18 ಗೋಲಿಗಳಿವೆ. ಆಟದಲ್ಲಿ ನೀನು 17 ಗೋಲಿಗಳನ್ನು ಗೆದ್ದರೆ, ನಿನ್ನಲ್ಲಿರಬಹುದಾದ ಒಟ್ಟು ಗೋಲಿಗಳ ಸಂಖ್ಯೆ ಎಷ್ಟು ? .....

2) ನಿನ್ನ ಹುಟ್ಟುಹಬ್ಬದಂದು ಗೆಳೆಯರಿಗೆ ಕೊಡಲು ನಿನ್ನ ಬಳಿ 45 ಚಾಕಲೇಟ್‌ಗಳಿವೆ. ಅದರಲ್ಲಿ 32 ಚಾಕಲೆಟ್‌ಗಳನ್ನು ಗೆಳೆಯರಿಗೆ ಕೊಟ್ಟರೆ ನಿನ್ನ ಹತ್ತಿರ ಉಳಿಯುವ ಚಾಕಲೇಟ್‌ಗಳ ಸಂಖ್ಯೆ ಎಷ್ಟು ? .....


NOT TO BE REPUBLISHED @KTBS

3) ನಿನ್ನ ಹತ್ತಿರ 48 ಹುಣಸೆಬೀಜಗಳಿವೆ. ಅದರಲ್ಲಿ 25 ಹುಣಸೆಬೀಜಗಳನ್ನು ಆಟದಲ್ಲಿ ಸೋತರೆ, ನಿನ್ನ ಹತ್ತಿರ ಉಳಿಯುವ ಹುಣಸೆಬೀಜಗಳ ಸಂಖ್ಯೆ ಎಷ್ಟು ?
.....

4) ಐಸ್‌ಕ್ಯಾಂಡಿ ಪೆಟ್ಟಿಗೆಯಲ್ಲಿ 87 ಐಸ್‌ಕ್ಯಾಂಡಿಗಳಿವೆ. ಮತ್ತೆ 9 ಐಸ್‌ಕ್ಯಾಂಡಿಗಳನ್ನು ಪೆಟ್ಟಿಗೆಗೆ ಹಾಕಿದರೆ ಪೆಟ್ಟಿಗೆಯಲ್ಲಿರುವ ಐಸ್‌ಕ್ಯಾಂಡಿಗಳ ಸಂಖ್ಯೆ ಎಷ್ಟು ?
.....


5) ಅಂಗಡಿಯಲ್ಲಿರುವ 60 ಲಾಡುಗಳಲ್ಲಿ 29 ಲಾಡುಗಳನ್ನು ಮಾರಾಟ ಮಾಡಿದರೆ, ಉಳಿಯುವ ಲಾಡುಗಳ ಸಂಖ್ಯೆ ಎಷ್ಟು ? .....

ಏಣಿಯ ಮೇಲೆ ಮಂಗಣ್ಣನ ಜಿಗಿದಾಟ



ಮಂಗಣ್ಣ ಏಣಿಯ ಮೇಲೆ ಜಿಗಿಯುತ್ತಿದ್ದಾನೆ. ಒಂದನೇ ಬಾರಿ 2 ಮೆಟ್ಟಿಲು, ಎರಡನೇ ಬಾರಿ 4 ಮೆಟ್ಟಿಲು, ಮೂರನೇ ಬಾರಿ 8 ಮೆಟ್ಟಿಲು, ಜಿಗಿಯುತ್ತಾನೆ. ಹಾಗಾದರೆ 32 ಮೆಟ್ಟಿಲು ಹೊಂದಿರುವ ಏಣಿಯನ್ನು ಏರಲು ಮಂಗಣ್ಣ ಎಷ್ಟು ಬಾರಿ ಜಿಗಿಯಬೇಕು? ಯೋಚಿಸು.

ಕೊಟ್ಟಿರುವುದನ್ನು ಎರಡು ಪಟ್ಟು ಮಾಡುವ ಜಾದುಗಾರನಾಟ.



@KBS NOT TO BE REPUBLISHED

ಓದಿ ತಿಳಿ.


10 ರ ಎರಡು ಪಟ್ಟು	=	20	15 ರ ಎರಡು ಪಟ್ಟು	=	30
11 ರ ಎರಡು ಪಟ್ಟು	=	.....	30 ರ ಎರಡು ಪಟ್ಟು	=	60
13 ರ ಎರಡು ಪಟ್ಟು	=	26	40 ರ ಎರಡು ಪಟ್ಟು	=	.....
19 ರ ಎರಡು ಪಟ್ಟು	=	.....	21 ರ ಎರಡು ಪಟ್ಟು	=	42
27 ರ ಎರಡು ಪಟ್ಟು	=	.....	17 ರ ಎರಡು ಪಟ್ಟು	=	.....

ಉಳಿದ ಸಂಖ್ಯೆಗಳನ್ನು ನೀನೆ ಮನಸ್ಸಿನಲ್ಲಿ ಎರಡು ಪಟ್ಟು ಮಾಡು.

ಗಮನಿಸು

* ಸಂಖ್ಯೆಯೊಂದನ್ನು ಎರಡರಿಂದ ಗುಣಿಸಿದಾಗ ಆ ಸಂಖ್ಯೆಯು ಎರಡು ಪಟ್ಟು ಆಗುವುದು.
* ಸಂಖ್ಯೆಯೊಂದಕ್ಕೆ ಅದೇ ಸಂಖ್ಯೆ ಕೂಡಿದಾಗ ಎರಡು ಪಟ್ಟು ಆಗುವುದು.

ಗೇಟಿನ ಕೆಳಗಿರುವ ಸಂಖ್ಯೆಗಳಿಗೆ ಎರಡು ಪಟ್ಟು ಸಂಖ್ಯೆಯನ್ನು ಗೇಟಿನ ಮೇಲ್ಭಾಗದಲ್ಲಿ ಬರೆಯುತ್ತಾ ಹೋಗು.




ಟ್ವಿಂಕಲ್ ಎಂಬ ಬೆಕ್ಕು ಹಾಲು ಕುಡಿಯಬೇಕೆಂದರೆ, ಒಂದೊಂದೇ ಗೇಟನ್ನು ದಾಟಿ ಹೋಗಬೇಕು. ಗೇಟಿನ ಕೆಳಭಾಗದಲ್ಲಿರುವ ಸಂಖ್ಯೆಯ ಎರಡು ಪಟ್ಟಾಗಲು ಬೇಕಾಗುವ ಸರಿಯಾದ ಸಂಖ್ಯೆಯನ್ನು ಗೇಟಿನ ಮೇಲೆ ಬರೆದರೆ ಮಾತ್ರ ಗೇಟು ತೆರೆದುಕೊಳ್ಳುತ್ತದೆ. ಸರಿ ಉತ್ತರ ಬರೆಯಲು ಟ್ವಿಂಕಲ್‌ಗೆ ಸಹಾಯ ಮಾಡಿ.

ಸಂಖ್ಯೆಯನ್ನು ಎರಡು ಪಟ್ಟು /ದುಪ್ಪಟ್ಟು ಮಾಡುವ ಆಟ.

ಆಟದ ನಿಯಮಗಳು :

* ನಿನ್ನ ಸ್ನೇಹಿತ / ಸ್ನೇಹಿತೆಯೊಂದಿಗೆ ಸೇರಿ ಈ ಆಟ ಆಡು.

* ಎರಡಂಕಿ ಸಂಖ್ಯೆ ಮಾತ್ರ ಬಳಸಿ ಈ ಆಟ ಆಡು.



@KTBS NOT TO BE REPUBLISHED


ಈ ರೀತಿ ಆಟ ಮುಂದುವರಿಸು.

ತಪ್ಪು ಉತ್ತರ ಹೇಳುವ ವಿದ್ಯಾರ್ಥಿ ಆಟದಲ್ಲಿ ಸೋತಂತಾಗುವುದು.

ಅಭ್ಯಾಸ 7.2

1) ಯಾವ ಪಾತ್ರೆಗೆ ಯಾವ ಮುಚ್ಚಳ ಸರಿಹೊಂದುವುದೆಂದು ಕಂಡುಹಿಡಿ.

ಮುಚ್ಚಳದಲ್ಲಿ ಸಂಖ್ಯೆ ಇದೆ. ಪಾತ್ರೆಯಲ್ಲಿ ಅದರ ಎರಡು ಪಟ್ಟಾಗುವ ಸಂಖ್ಯೆ ಇದೆ. ಗೆರೆ ಎಳೆದು ಹೊಂದಿಸು.



2) ಕೆಳಗಿನ ಸಂಖ್ಯೆಗಳಿಗೆ ಎರಡು ಪಟ್ಟಾಗುವ ಸಂಖ್ಯೆ ಬರೆ.

10	→	20	16	→	25 →
11	→		17	→	30 →
12	→		18	→	35 →
13	→		19	→	40 →
14	→		20	→	45 →
15	→		21	→	48 →

3) ಕೆಳಗಿನ ಸಂಖ್ಯೆಗಳನ್ನು ಎರಡು ಪಟ್ಟು ಮಾಡಿ ಮಾದರಿಯಂತೆ ಬರೆ.

ಮಾದರಿ : ಹತ್ತೊಂಬತ್ತು – ಮೂವತ್ತೆಂಟು.

1) ಇಪ್ಪತ್ತು ⟶
2) ಇಪ್ಪತ್ತಾರು ⟶
3) ಮೂವತ್ತೆಂಟು ⟶
4) ಮೂವತ್ತೆರಡು ⟶
5) ಇಪ್ಪತ್ತೇಳು ⟶
6) ನಲವತ್ತ ನಾಲ್ಕು ⟶


@KTBS NOT TO BE REPUBLISHED


4) ಮನಸ್ಸಿನಲ್ಲಿ 2 ರಿಂದ ಗುಣಿಸಿ ಎರಡು ಪಟ್ಟಾಗುವ ಸಂಖ್ಯೆ ಬರೆ.

×	7	9	12	24	36	43	49	50	100
2									

ಮಾಡಿ ಆಡು

ಚಿತ್ರದಲ್ಲಿ ತೋರಿಸಿದಂತಹ ಎರಡು ರಟ್ಟುಗಳನ್ನು ಕತ್ತರಿಸಿಕೊ ಮತ್ತು ಸಂಖ್ಯೆಗಳನ್ನು ಬರೆದುಕೊ. ಚಿಕ್ಕ ರಟ್ಟಿನಲ್ಲಿ ಸಂಖ್ಯೆಗಳನ್ನು, ದೊಡ್ಡ ರಟ್ಟಿನಲ್ಲಿ ಈ ಸಂಖ್ಯೆಗಳಿಗೆ ಎರಡು ಪಟ್ಟು ಸಂಖ್ಯೆಗಳನ್ನು ಬರೆದುಕೊ.





@KTBS NOT TO BE REPUBLISHED

ದೊಡ್ಡ ರಟ್ಟಿನ ತುಂಡಿನ ಮೇಲೆ ಚಿಕ್ಕ ರಟ್ಟಿನ ತುಂಡನ್ನು ಸರಿಯಾಗಿ ಇಟ್ಟು ಮಧ್ಯದಲ್ಲಿ ದಾರದಿಂದ ಗಂಟು ಹಾಕಿ ಜೋಡಿಸಿಕೊ. ಮೇಲಿನ ಚಕ್ರದ ಒಂದು ಸಂಖ್ಯೆಗೆ ಎರಡುಪಟ್ಟಾಗುವ ಸಂಖ್ಯೆಯನ್ನು ಗುರುತಿಸಿ, ಕೆಳಗಿನ ಚಕ್ರವನ್ನು ತಿರುಗಿಸಿ ಜೋಡಿಸು. ಚಕ್ರದಲ್ಲಿರುವ ಎಲ್ಲ ಸಂಖ್ಯೆಗಳು ಮುಗಿಯುವವರೆಗೆ ಆಟವಾಡು.

*****

ಅಧ್ಯಾಯ 8

ಭಿನ್ನರಾಶಿ ಸಂಖ್ಯೆಗಳು


P8R8B5

ಈ ಅಧ್ಯಾಯವನ್ನು ಕಲಿತ ನಂತರ ನೀನು,

* ಪೂರ್ಣದಲ್ಲಿ ಅರ್ಧ, ಕಾಲು ಮತ್ತು ಮುಕ್ಕಾಲು ಭಾಗಗಳನ್ನು ಗುರುತಿಸುವೆ ಮತ್ತು ನಿತ್ಯ ಜೀವನದ ಸನ್ನಿವೇಶಗಳಿಗೆ ಸಂಬಂಧ ಕಲ್ಪಿಸುವೆ,
* ಸಾಂಖ್ಯಿಕ ರೂಪದಲ್ಲಿರುವ (ಅರ್ಧ) $\frac{1}{2}$, (ಕಾಲು) $\frac{1}{4}$, (ಮುಕ್ಕಾಲು) $\frac{3}{4}$

ಈ ಭಿನ್ನರಾಶಿಗಳ ರೂಪಗಳನ್ನು ಗುರುತಿಸುವೆ ಹಾಗೂ ಅರ್ಥೈಸಿಕೊಳ್ಳುವೆ.

ಅರ್ಧ, ಕಾಲು, ಮುಕ್ಕಾಲು




NOT TO BE REPUBLISHED

ಕಿರಣನಿಗೆ ಅವನ ಅಮ್ಮ, ಟಾಮಿಗೆ ಹಾಕಲು ಒಂದು ರೊಟ್ಟಿ ಕೊಟ್ಟಳು. ಇದನ್ನು ನೋಡಿದ ಅವನ ತಂಗಿ ಜ್ಯೋತಿ, ನಾನೂ ಟಾಮಿಗೆ ರೊಟ್ಟಿ ಹಾಕುತ್ತೇನೆ ಕೊಡು ಎಂದು ಅಣ್ಣನೊಂದಿಗೆ ಗಲಾಟೆ ಮಾಡತೊಡಗಿದಳು. ಅಮ್ಮ ಬಂದು ಗಲಾಟೆ ನಿಲ್ಲಿಸಿ, ಕಾರಣ ತಿಳಿದು ಒಬ್ಬೊಬ್ಬರು ಅರ್ಧಭಾಗ ರೊಟ್ಟಿ ಹಾಕಲು ತಿಳಿಸಿದಳು.




ಚಿತ್ರ ವೀಕ್ಷಿಸಿ, ಅರ್ಧ ಭಾಗ ಯಾವುದು ತಿಳಿ.

ಒಂದು ರೊಟ್ಟಿ



ಎರಡು ಸಮ ಭಾಗಗಳು




ಅರ್ಧ ಭಾಗ ರೊಟ್ಟಿ



ಒಂದು ಹಾಳೆ



ಎರಡು ಸಮ ಭಾಗಗಳು



ಅರ್ಧ ಭಾಗ ಹಾಳೆ



ಒಂದು ಕೇಕ್




ಎರಡು ಸಮ ಭಾಗಗಳು




ಅರ್ಧ ಭಾಗ ಕೇಕ್



ಒಂದು ಬಿಸ್ಕತ್




ಎರಡು ಸಮ ಭಾಗಗಳು




ಅರ್ಧ ಭಾಗ ಬಿಸ್ಕತ್




ಒಂದು ಚೌಕ



ಎರಡು ಸಮ ಭಾಗಗಳು



ಅರ್ಧ ಭಾಗಕ್ಕೆ ಬಣ್ಣ ತುಂಬಿದೆ




NOT TO BE REPUBLISHED



* ಗಾಜಿನ ಲೋಟದ ಅರ್ಧ ಭಾಗ ನೀರು ತುಂಬಿದೆ.

* ಗಾಜಿನ ಲೋಟದ ಅರ್ಧ ಭಾಗ ಖಾಲಿ ಇದೆ.



* ಚೌಕದ ಅರ್ಧ ಭಾಗಕ್ಕೆ ಬಣ್ಣ ತುಂಬಿದೆ.

* ಚೌಕದ ಅರ್ಧ ಭಾಗಕ್ಕೆ ಬಣ್ಣ ತುಂಬಿಲ್ಲ.





* ಅರ್ಧ ಭಾಗಕ್ಕೆ ಕೆಂಪು ಬಣ್ಣ ತುಂಬಿದೆ.


* ಅರ್ಧ ಭಾಗಕ್ಕೆ ಹಸಿರು ಬಣ್ಣ ತುಂಬಿದೆ.


ಕೆಳಗಿನ ಚಿತ್ರಗಳನ್ನು ಗಮನಿಸು. ಎರಡು ಸಮಭಾಗ ಮಾಡಲು ಸಾಧ್ಯವಿರುವ ಚಿತ್ರಗಳಿಗೆ ಚುಕ್ಕೆಗಳ ಮೂಲಕ ಗೆರೆ ಎಳೆದು ಎರಡು ಸಮಭಾಗಗಳನ್ನು ಮಾಡಬಲ್ಲೆಯಾ ?

ಮಾದರಿ :



















D




@KTBS NOT TO BE REPUBLISHED














ಕೆಳಗಿನ ಅಕ್ಷರಗಳ ಅರ್ಧ ಭಾಗ ವೀಕ್ಷಿಸು ಉಳಿದ ಅರ್ಧ ಭಾಗ ಊಹಿಸಿ, ಮಾದರಿಯಂತೆ ಬರೆ.

ಮಾದರಿ :






@KTBS NOT TO BE REPUBLISHED

* ಒಂದೇ ವಸ್ತುವಿನ ಎರಡು ಅರ್ಧಗಳನ್ನು ಒಂದರ ಮೇಲೊಂದು ಜೋಡಿಸಿದಾಗ ಅವು ಸಮವಾಗಿ ಜೋಡಣೆಯಾಗುತ್ತವೆ.
* ಎರಡು ಸಮಭಾಗಗಳಲ್ಲಿ ಒಂದನ್ನು ಅರ್ಧಭಾಗ ಎನ್ನುತ್ತಾರೆ.
* ಒಂದೇ ವಸ್ತುವಿನ ಎರಡು ಅರ್ಧ ಸೇರಿಸಿದಾಗ ಒಂದು ಪೂರ್ಣವಾಗುತ್ತದೆ.

ಮಾಡಿ ತಿಳಿ :

ಕೆಳಗಿನ ಚಿತ್ರದಂತಹ ಆಕಾರದ ನಾಲ್ಕು ಹಾಳೆಗಳನ್ನು ತೆಗೆದುಕೊ. ಚಿತ್ರದಲ್ಲಿ ತೋರಿಸಿದ ಹಾಗೆ ಗೆರೆ ಎಳೆ. ಈಗ ಪ್ರತಿ ಹಾಳೆಯ ಒಂದೊಂದು ಭಾಗ ಅರ್ಧ ಭಾಗವಾಗುವುದೆ? ಮಾಡಿ ತಿಳಿ.




@KTBS NOT TO BE REPUBLISHED

ಕಾಲುಭಾಗವನ್ನು ತಿಳಿ(ಕಲಿ)


ಈ ಬ್ರೆಡ್ ತುಂಡನ್ನು ನಾಲ್ಕು ಬೆಕ್ಕಿನ ಮರಿಗಳಿಗೆ ಸಮನಾಗಿ ಹೇಗೆ ಹಂಚುವುದು ?



* ನಾಲ್ಕು ಭಾಗಗಳಲ್ಲಿ ಒಂದು ಭಾಗ ಎಣ್ಣೆ ತುಂಬಿದೆ. ಅಂದರೆ ಕಾಲು ಭಾಗ ಎಣ್ಣೆ ತುಂಬಿದೆ.



ಒಂದು ಚೌಕದ ನಾಲ್ಕು ಸಮಭಾಗಗಳಲ್ಲಿ ಒಂದು ಭಾಗಕ್ಕೆ ಬಣ್ಣ ತುಂಬಿದೆ. ಅಂದರೆ ಕಾಲುಭಾಗಕ್ಕೆ ಬಣ್ಣ ತುಂಬಿದೆ.



@KTBS NOT TO BE REPUBLISHED

* ಉರಿಯುವ ಮೊದಲು ನಾಲ್ಕು ಸಮಭಾಗಗಳಿದ್ದವು ಒಂದು ಭಾಗ ಉರಿದಿದೆ. ಆದ್ದರಿಂದ ಕಾಲುಭಾಗ ಉರಿದಂತಾಯಿತಲ್ಲವೆ ?



* ಪುಟ್ಟಿ ತಿಂದಿರುವ ಚಾಕಲೇಟ್‌ನ ಭಾಗವೆಷ್ಟು ?
ನಾಲ್ಕು ಸಮಭಾಗಗಳಿದ್ದವು. ಒಂದು ಭಾಗ ತಿಂದಿದ್ದಾಳೆ.

1)





2)





* ಈ ಚಿತ್ರಗಳಲ್ಲಿ ಬಣ್ಣ ತುಂಬಿದ ಭಾಗ ಕಾಲುಭಾಗವಲ್ಲ. ಏಕೆ ?





@KTBS NOT TO BE REPUBLISHED

ನೆನಪಿಡು

* ನಾಲ್ಕು ಸಮಭಾಗಗಳಲ್ಲಿ ಒಂದನ್ನು ಕಾಲುಭಾಗ ಎನ್ನುವರು.
* ಅರ್ಧದ ಅರ್ಧವನ್ನು ಕಾಲುಭಾಗ ಎನ್ನುವರು.
* ಒಂದು ಪೂರ್ಣದಲ್ಲಿ ನಾಲ್ಕು ಕಾಲುಭಾಗಗಳಿವೆ.

ಹಾಳೆ ಮಡಿಸಿ ಮುಕ್ಕಾಲು ಭಾಗ ತಿಳಿ.


* ಒಂದು ಹಾಳೆ ತೆಗೆದುಕೊಂಡು ಅದರಲ್ಲಿ ನಾಲ್ಕು ಸಮಭಾಗ ಮಾಡಿದೆ.
* ಒಂದು ಸಮಭಾಗಕ್ಕೆ ಹಸಿರು ಬಣ್ಣ ತುಂಬಿದೆ. ಹಸಿರು ಬಣ್ಣ ತುಂಬಿದ ಭಾಗ ಕಾಲುಭಾಗ ಎಂದು ನಿನಗೆ ತಿಳಿದಿದೆ.
* ಮೂರು ಸಮಭಾಗಗಳಿಗೆ ಕೆಂಪು ಬಣ್ಣ ತುಂಬಿದೆ. ಹಾಗಾದರೆ ಕೆಂಪು ಬಣ್ಣ ತುಂಬಿದ ಭಾಗವೆಷ್ಟು? ಯೋಚಿಸು.

ಕೆಳಗಿನ ಚಿತ್ರಗಳನ್ನು ಗಮನಿಸು.

*ಗ್ಲಾಸ್‌ನ ನಾಲ್ಕು ಸಮಭಾಗಗಳಲ್ಲಿ ಮೂರು ಸಮಭಾಗಗಳವರೆಗೆ ನೀರು ತುಂಬಿದೆ.



* ಕೇಕಿನ ನಾಲ್ಕು ಸಮಭಾಗಗಳಲ್ಲಿ ಒಂದು ಭಾಗ ತಿನ್ನಲಾಗಿದೆ.



* ಒಂದು ಸೇಬು ಹಣ್ಣಿನಲ್ಲಿ ನಾಲ್ಕು ಸಮಭಾಗ ಮಾಡಿ ಒಂದು ಸಮಭಾಗ ತಿನ್ನಲಾಗಿದೆ.




© KTBS NOT TO BE REPUBLISHED

ನೆನಪಿಡು


* **ನಾಲ್ಕು ಸಮಭಾಗಗಳಲ್ಲಿ ಮೂರು ಸಮಭಾಗಗಳನ್ನು ಮುಕ್ಕಾಲು ಭಾಗ ಎನ್ನುವರು.**
* **ಮೂರು ಕಾಲು ಭಾಗಗಳೇ ಮುಕ್ಕಾಲು.**

ಚಿತ್ರ ನೋಡಿ ನೆನಪಿಸಿಕೊ.







ಒಂದು ಕಾಲು ಭಾಗ



ಎರಡು ಕಾಲುಭಾಗ (ಅರ್ಧ)



ಮೂರು ಕಾಲುಭಾಗ (ಮುಕ್ಕಾಲು)




ನಾಲ್ಕು ಕಾಲು ಭಾಗ (ಪೂರ್ಣ)

@KTBS
NOT TO BE REPUBLISHED


ಅಭ್ಯಾಸ 8.1

I. ಸೂಚಿಸಿದ ಭಾಗವನ್ನು ಮಾದರಿಯಂತೆ ಭಿನ್ನರಾಶಿಯಲ್ಲಿ ಬರೆ.

ಮಾದರಿ :




* ಬಣ್ಣ ತುಂಬಿದ ಭಾಗ = ಅರ್ಧ.
* ಬಣ್ಣ ತುಂಬಿರದ ಭಾಗ = ಅರ್ಧ.




* ಬಣ್ಣ ತುಂಬಿರದ ಭಾಗ = ...

* ಬಣ್ಣ ತುಂಬಿದ ಭಾಗ = ...



* ಹಸಿರು ಬಣ್ಣ ತುಂಬಿದ ಭಾಗ = ...

* ಕೆಂಪು ಬಣ್ಣ ತುಂಬಿದ ಭಾಗ = ...




* ಬಣ್ಣ ತುಂಬಿರುವ ಭಾಗ = ...


* ಬಣ್ಣ ತುಂಬಿರದ ಭಾಗ = ...

@KTBS NOT TO BE REPUBLISHED


II. ಚಿತ್ರಗಳಿಗೆ ಬಣ್ಣ ತುಂಬಿರುವುದನ್ನು ನೋಡಿ, ಗೆರೆ ಎಳೆದು ಹೊಂದಿಸು.



ಅರ್ಧ ಭಾಗ



ಮುಕ್ಕಾಲು ಭಾಗ



ಕಾಲು ಭಾಗ


III ಮಾದರಿಯಂತೆ ಬರೆ.

ಮಾದರಿ :



ಕಾಲು ಕಿ ಗ್ರಾಂ





.....

@KTBS NOT TO BE REPUBLISHED

IV. ಮಾದರಿಯಂತೆ ಬರೆ.

ಮಾದರಿ :



⟶ ಕಾಲು ರೂಪಾಯಿ.



⟶ .....




→ .....




→ .....

V. ಸೂಚಿಸಿದ ಹಾಗೆ ಬಣ್ಣ ತುಂಬು.


1) ಚಿತ್ರದ ಅರ್ಧಭಾಗಕ್ಕೆ ಬಣ್ಣ ತುಂಬು



2) ಡ್ರಮ್ಮಿನ ಚಿತ್ರದಲ್ಲಿ ಮುಕ್ಕಾಲು ಭಾಗಕ್ಕೆ ಬಣ್ಣ ತುಂಬು.




3) ಚಿತ್ರದ ಕಾಲು ಭಾಗಕ್ಕೆ ಬಣ್ಣ ತುಂಬು.




@KTBS NOT TO BE REPUBLISHED

VI. ಎರಡು ಸಮ ಭಾಗವಾಗುವಂತೆ ಗೆರೆ ಎಳೆದು ಅರ್ಧಭಾಗಕ್ಕೆ ಬಣ್ಣ ತುಂಬು.




VI. ಚಿತ್ರದಲ್ಲಿ ಗೆರೆಗಳನ್ನು ಎಳೆದು, ಕಾಲುಭಾಗವನ್ನು ಬಣ್ಣ ತುಂಬಿ ಗುರುತಿಸು.



@KTBS NOT TO BE REPUBLISHED

VII. ನಿನಗೆ ಇಷ್ಟವಾದ ಚಿತ್ರ ಬರೆದು,ಮಾದರಿಯಂತೆ ಕೆಳಗಿನ ಭಾಗಗಳನ್ನು ಬಣ್ಣ ತುಂಬಿ ಗುರುತಿಸು.

ಮಾದರಿ : ಕಾಲು ಭಾಗ –



1) ಅರ್ಧ ಭಾಗ –


2) ಕಾಲು ಭಾಗ –

3) ಮುಕ್ಕಾಲು ಭಾಗ –

ಅರ್ಧ, ಕಾಲು ಮತ್ತು ಮುಕ್ಕಾಲು ಇವುಗಳ– ಸಾಂಖ್ಯಿಕ ರೂಪ


ಅರ್ಧ, ಕಾಲು ಮತ್ತು ಮುಕ್ಕಾಲು ಭಾಗಗಳನ್ನು ಗುರುತಿಸುವುದನ್ನು ಕಲಿತಿರುವೆ. ಈಗ ಇವುಗಳಿಗಿರುವ ಸಾಂಖ್ಯಿಕ ರೂಪವನ್ನು ತಿಳಿ.

1)



* ಚಿತ್ರದಲ್ಲಿರುವ ಒಟ್ಟು ಸಮಭಾಗಗಳು ಎರಡು.
* ಚಿತ್ರದಲ್ಲಿ ಬಣ್ಣ ತುಂಬಿರುವ ಭಾಗ ಒಂದು.
* ಬಣ್ಣ ತುಂಬಿರುವ ಭಾಗವನ್ನು ಭಿನ್ನರಾಶಿಯಲ್ಲಿ ಅರ್ಧ ಎನ್ನುವರು.
* ಅರ್ಧ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ = $\frac{1}{2}$

2)




* ಚಿತ್ರದಲ್ಲಿರುವ ಸಮಭಾಗಗಳು = ಎರಡು
* ಬಣ್ಣ ಹಾಕಿದ ಭಾಗ = ಒಂದು.
* ಬಣ್ಣ ಹಾಕಿರುವ $\frac{1}{2}$ ಭಾಗದ ಭಿನ್ನರಾಶಿಯ ಸಾಂಖ್ಯಿಕರೂಪ = $\frac{1}{2}$
* ಹಾಗಾದರೆ ಈ ಭಿನ್ನರಾಶಿಯ ಅರ್ಥವೇನು ?

© KTBS NOT TO BE REPUBLISHED


ಒಂದು ವಸ್ತುವಿನಲ್ಲಿ ಎರಡು ಸಮಭಾಗ ಮಾಡಿ,
ಒಂದು ಸಮಭಾಗ ತೆಗೆದುಕೊಂಡಿರುವುದನ್ನು
ಸೂಚಿಸುವುದೇ ಅರ್ಧ $\frac{1}{2}$

1)



*ಚಿತ್ರದಲ್ಲಿರುವ ಒಟ್ಟು ಸಮ ಭಾಗಗಳು ನಾಲ್ಕು.
* ಬಣ್ಣ ತುಂಬಿರುವ ಭಾಗ ಒಂದು.
*ಬಣ್ಣ ತುಂಬಿರುವ ಭಾಗವನ್ನು ಭಿನ್ನರಾಶಿಯಲ್ಲಿ ಕಾಲುಭಾಗ ಎನ್ನುವರು.

2)



* ಚಿತ್ರದಲ್ಲಿರುವ ಸಮಭಾಗಗಳು ನಾಲ್ಕು.
* ಬಣ್ಣ ಹಚ್ಚಿದ ಭಾಗ = 1
* ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ = $\frac{1}{4}$


* ಹಾಗಾದರೆ ಈ $\frac{1}{4}$ ಭಿನ್ನರಾಶಿಯ ಅರ್ಥವೇನು ? $\frac{1}{4}$

©KTBS NOT TO BE REPUBLISHED

ಒಂದು ವಸ್ತುವಿನಲ್ಲಿ ನಾಲ್ಕು ಸಮಭಾಗಗಳನ್ನು ಮಾಡಿ, ಒಂದು ಸಮಭಾಗ ತೆಗೆದುಕೊಂಡಿರುವುದನ್ನು ಸೂಚಿಸುವುದೇ **ಕಾಲುಭಾಗ**

ಅರ್ಧ ($\frac{1}{2}$) ಮತ್ತು ಕಾಲು ಭಾಗ ($\frac{1}{4}$) ಅರ್ಥೈಸಿದ ಹಾಗೆ ಮುಕ್ಕಾಲು ಭಾಗವನ್ನು ಅರ್ಥೈಸಲು ಪ್ರಯತ್ನಿಸು.

1)




* ಒಟ್ಟು ಸಮಭಾಗಗಳು ನಾಲ್ಕು.

* ಬಣ್ಣ ತುಂಬಿರುವ ಭಾಗಗಳು ಮೂರು.

* ಬಣ್ಣ ತುಂಬಿರುವ ಭಾಗವನ್ನು ಭಿನ್ನರಾಶಿಯಲ್ಲಿ ಮುಕ್ಕಾಲು ಭಾಗ ಎನ್ನುವರು.

2)



* ಮುಕ್ಕಾಲು ಭಾಗದ ಸಾಂಖ್ಯಿಕ ರೂಪ = $\frac{3}{4}$

* ಚಿತ್ರದಲ್ಲಿರುವ ಒಟ್ಟು ಸಮ ಭಾಗಗಳು = ನಾಲ್ಕು

* ಬಣ್ಣ ತುಂಬಿರುವ ಭಾಗಗಳು = ಮೂರು

* ಬಣ್ಣ ತುಂಬಿರುವ ಭಾಗಗಳನ್ನು ಭಿನ್ನರಾಶಿಯಲ್ಲಿ ಹೇಗೆ ಹೇಳುತ್ತಾರೆ ? .....

* ಮುಕ್ಕಾಲು ಭಾಗದ ಸಾಂಖ್ಯಿಕ ರೂಪ = ...

@KTBS NOT TO BE REPUBLISHED

$\frac{3}{4}$ ಎಂದರೆ ಒಂದು ವಸ್ತುವಿನಲ್ಲಿ ನಾಲ್ಕು ಸಮಭಾಗಗಳನ್ನು ಮಾಡಿ ಮೂರು ಸಮಭಾಗ ತೆಗೆದುಕೊಂಡಿರುವುದನ್ನು ಸೂಚಿಸುವುದೇ **ಮುಕ್ಕಾಲು ಭಾಗ**


* ಒಂದು ವಸ್ತುವಿನಲ್ಲಿ ಎರಡು ಸಮಭಾಗ ಮಾಡಿ ಒಂದು ಸಮಭಾಗ ತೆಗೆದುಕೊಂಡಿರುವುದನ್ನು ಸೂಚಿಸುವುದೇ ಅರ್ಧ. ಇದರ ಸಾಂಖ್ಯಿಕ ರೂಪ = $\frac{1}{2}$

* ಒಂದು ವಸ್ತುವಿನಲ್ಲಿ ನಾಲ್ಕು ಸಮಭಾಗ ಮಾಡಿ ಒಂದು ಸಮಭಾಗ ತೆಗೆದುಕೊಂಡಿರುವುದನ್ನು ಸೂಚಿಸುವುದೇ ಕಾಲು ಭಾಗ. ಇದರ ಸಾಂಖ್ಯಿಕ ರೂಪ = $\frac{1}{4}$


* ಒಂದು ವಸ್ತುವಿನಲ್ಲಿ ನಾಲ್ಕು ಸಮಭಾಗ ಮಾಡಿ ಮೂರು ಸಮಭಾಗ ತೆಗೆದುಕೊಂಡಿರುವುದನ್ನು ಸೂಚಿಸುವುದೇ ಮುಕ್ಕಾಲು ಭಾಗ. ಇದರ ಸಾಂಖ್ಯಿಕ ರೂಪ = $\frac{3}{4}$

ಅಭ್ಯಾಸ 8.2


I. ಚಿತ್ರ ನೋಡಿ ಬಿಟ್ಟ ಸ್ಥಳ ತುಂಬು.

1) 


* ಬಣ್ಣ ತುಂಬಿರುವ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ : .....

2) 


* ಬಣ್ಣ ತುಂಬಿರುವ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ : .....

3) 

* ಬಣ್ಣ ತುಂಬಿರುವ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ : .....

4) 

*ಬಣ್ಣ ತುಂಬಿರುವ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ : .....

5) 

* ಬಣ್ಣ ತುಂಬಿರುವ ಭಾಗದ ಭಿನ್ನರಾಶಿಯ ಸಾಂಖ್ಯಿಕ ರೂಪ : .....

@KTBS NOT TO BE REPUBLISHED


II. ಗೆರೆ ಎಳೆದು ಹೊಂದಿಸು.


'ಅ'	'ಬ'
1) ಅರ್ಧ ಭಾಗ	$\frac{1}{4}$
2) ಕಾಲು ಭಾಗ	$\frac{3}{4}$
3) ಮುಕ್ಕಾಲು ಭಾಗ	$\frac{1}{2}$

III. ಸಾಂಖ್ಯಿಕ ರೂಪ ನೋಡಿ ಚಿತ್ರಗಳಲ್ಲಿ ಬಣ್ಣ ತುಂಬು.


$\frac{1}{2}$










$\frac{1}{4}$









$\frac{3}{4}$







IV. ಸಾಂಖ್ಯಿಕ ರೂಪ ಬರೆ.

1) ಅರ್ಧ ಭಾಗ ⟶

2) ಕಾಲು ಭಾಗ ⟶

3) ಮುಕ್ಕಾಲು ಭಾಗ ⟶

@KTBS NOT TO BE REPUBLISHED

V. ಮಾದರಿಯಂತೆ ಕೆಳಗಿನ ಭಿನ್ನರಾಶಿಗಳನ್ನು ಅರ್ಥೈಸು.

1) $\frac{1}{2}$ ⟶ ಎರಡು ಸಮಭಾಗ ಮಾಡಿ ಒಂದು ಭಾಗ ತೆಗೆದುಕೊಂಡಿದೆ.


2) $\frac{1}{4}$ ⟶

3) $\frac{3}{4}$ ⟶

VI. ಕೆಳಗಿನ ಚಿತ್ರಗಳನ್ನು ಮಾದರಿಯಂತೆ ಭಿನ್ನರಾಶಿಯಲ್ಲಿ ಅರ್ಥೈಸು.

1) 

ಎರಡು ಸಮಭಾಗ ಮಾಡಿ ಒಂದು ಭಾಗಕ್ಕೆ ಬಣ್ಣ ತುಂಬಿದೆ. ಬಣ್ಣ ತುಂಬಿದ ಭಾಗ ಅರ್ಧ ($\frac{1}{2}$).

2) 

3) 

ಚಟುವಟಿಕೆ :

ಗೆಳೆಯರೊಂದಿಗೆ ದಾಳದ ಆಟವಾಡು.

ಒಂದು ದಾಳ (ಡೈಸ್)ವನ್ನು ತೆಗೆದುಕೊ. ಅದರ ಎದುರು ಬದುರಿನ ಮುಖಗಳ ಮೇಲೆ $\frac{1}{2}, \frac{1}{4}$ ಮತ್ತು $\frac{3}{4}$ ಬರೆದಿರುವ ಮಿಂಚುಪಟ್ಟಿಗಳನ್ನು ಅಂಟಿಸಿಕೊ. $\frac{1}{2}, \frac{1}{4}, \frac{3}{4}$ ಸಂಕೇತಗಳನ್ನು ಪ್ರತಿನಿಧಿಸುವ ಚಿತ್ರಗಳನ್ನು ಮಾಡಿಕೊ. (ಕನಿಷ್ಟ 5 ಸೆಟ್‌ಗಳು)

ನಿನ್ನ ಮೂವರು ಸ್ನೇಹಿತರ ಗುಂಪಿನಲ್ಲಿ ಕುಳಿತು ಆಟವಾಡಬೇಕು. ಗುಂಪಿನ ಮಧ್ಯದಲ್ಲಿ ಮಿಂಚುಪಟ್ಟಿಗಳ ರಾಶಿ ಹಾಕು. ಕ್ರಮವಾಗಿ ಒಬ್ಬರ ನಂತರ ಒಬ್ಬರು ದಾಳ ಹಾಕಬೇಕು. ದಾಳದ ಮೇಲ್ಮುಖವಾಗಿ ಕಾಣುವ ಭಿನ್ನರಾಶಿಗೆ, ಭಿನ್ನರಾಶಿಯ ಮಿಂಚುಪಟ್ಟಿಗಳ ರಾಶಿಯಿಂದ ಸರಿಯಾದ ಮಿಂಚುಪಟ್ಟಿಯನ್ನು ಆರಿಸಿಕೊಳ್ಳಬೇಕು. (ಭಿನ್ನರಾಶಿ ಸಂಕೇತ ಪ್ರತಿನಿಧಿಸುವ ಮಿಂಚುಪಟ್ಟಿ ತೆಗೆದಿಟ್ಟುಕೊ.) ಹೀಗೆ ಒಬ್ಬರಾದ ನಂತರ ಒಬ್ಬರು ದಾಳ ಹಾಕಿ, ಮಧ್ಯದಲ್ಲಿರುವ ಮಿಂಚುಪಟ್ಟಿಗಳು ಮುಗಿಯುವವರೆಗೆ ಆಟ ಮುಂದುವರಿಸಬೇಕು. ಯಾವ ವಿದ್ಯಾರ್ಥಿ ಹೆಚ್ಚು ಕಾರ್ಡುಗಳನ್ನು ಸರಿಯಾಗಿ ಆಯ್ಕೆ ಮಾಡಿಕೊಂಡಿರುತ್ತಾನೊ/ಳೊ, ಆ ವಿದ್ಯಾರ್ಥಿ/ನಿ ಈ ಆಟದಲ್ಲಿ ಗೆದ್ದಂತಾಗುವುದು.

*****

NOT TO BE REPUBLISHED ©KTBS

ಅಧ್ಯಾಯ 9

ಹಣ

S8P3M2

ಈ ಅಧ್ಯಾಯವನ್ನು ಕಲಿತ ನಂತರ ನೀನು,

* ಆಟಿಕೆಯ ನಾಣ್ಯ, ನೋಟುಗಳನ್ನು ಬಳಸಿ ರೂಪಾಯಿಯನ್ನು ಪೈಸೆಗೆ ಪರಿವರ್ತಿಸುವೆ,
* ಪರಿವರ್ತನೆ ಇಲ್ಲದೆ ಹಣದ ಸಂಕಲನ ಮತ್ತು ವ್ಯವಕಲನ ಮಾಡುವೆ,
* ದರಪಟ್ಟಿ ಹಾಗೂ ಸರಳ ರಶೀದಿಯನ್ನು ಪರಿಚಯಿಸಿಕೊಳ್ಳುವೆ.

ರೂಪಾಯಿಯನ್ನು ಪೈಸೆಗೆ ಪರಿವರ್ತಿಸುವುದು.


ಚಟುವಟಿಕೆ : ಆಟಿಕೆಯ ನಾಣ್ಯಗಳನ್ನು ಮತ್ತು ನೋಟುಗಳನ್ನು ತಯಾರಿಸು.

* ಟೇಬಲ್ ಮೇಲೆ ಒಂದೊಂದಾಗಿ ನಾಣ್ಯವನ್ನಿಟ್ಟು ಅದರ ಮೇಲೆ ತೆಳು ಹಾಳೆಯನ್ನಿಡು.
* ಒಂದು ಕೈಯಿಂದ ಹಾಳೆಯನ್ನು ಗಟ್ಟಿಯಾಗಿ ಹಿಡಿ. ಇನ್ನೊಂದು ಕೈಯಿಂದ ಪೆನ್ಸಿಲನ್ನು ಹಾಳೆಯ ಮೇಲೆ ನಯವಾಗಿ ತೀಡು. ಹಾಳೆಯ ಮೇಲೆ ನಾಣ್ಯದ ಚಿತ್ರ ಮೂಡುತ್ತದೆ.
* ಹೀಗೆ ಎಲ್ಲ ನಾಣ್ಯಗಳ ಚಿತ್ರ ಪಡೆ
* ನಾಣ್ಯ ಮೂಡಿರುವ ಹಾಳೆಯ ಭಾಗಗಳನ್ನು ಕತ್ತರಿಸಿ ತೆಗೆದುಕೊ.



* ಬಿಳಿ ಹಾಳೆಯನ್ನು ಬೇರೆ ಬೇರೆ ನೋಟಿನ ಆಕಾರದಲ್ಲಿ ಕತ್ತರಿಸಿಕೊ.






© KTBS NOT TO BE REPUBLISHED













* ಕತ್ತರಿಸಿದ ಹಾಳೆಯ ಮೇಲೆ ನೋಟಿನ ಬೆಲೆಯನ್ನು ಬರೆ. ಈಗ ಆಟವಾಡಲು ನಿನ್ನಲ್ಲಿ ಆಟಿಕೆಯ ನಾಣ್ಯ ಮತ್ತು ನೋಟುಗಳಿವೆ.

© NCERT NOT TO BE REPUBLISHED

* ಬೇರೆ ಬೇರೆ ರೂಪಾಯಿಯ ನೋಟುಗಳಿಗೆ ಸರಿ ಹೊಂದುವ ನಾಣ್ಯಗಳನ್ನು ಗುರುತಿಸು.



=



* ಒಂದು ರೂಪಾಯಿಗೆ 50 ಪೈಸೆಯ ಎರಡು ನಾಣ್ಯಗಳು ಸಮ.

ಒಂದು ರೂಪಾಯಿ ಎಂದರೆ 100 ಪೈಸೆಗಳು.
ರೂಪಾಯಿಯ ಸಂಕೇತ ₹



=



=



=



* 2 ರೂಪಾಯಿಗೆ 1 ರೂಪಾಯಿಯ ಎರಡು ನಾಣ್ಯಗಳು ಸಮ.
* 2 ರೂಪಾಯಿಗೆ 1 ರೂಪಾಯಿಯ ಒಂದು ನಾಣ್ಯ, ಮತ್ತು 50 ಪೈಸೆಯ ಎರಡು ನಾಣ್ಯಗಳು ಸಮ.
* 2 ರೂಪಾಯಿಗೆ 50 ಪೈಸೆಯ ನಾಲ್ಕು ನಾಣ್ಯಗಳು ಸಮ.

2 ರೂಪಾಯಿ ಎಂದರೆ 200 ಪೈಸೆಗಳು

© KTBS NOT TO BE REPUBLISHED



=



=



---

* 5 ರೂಪಾಯಿಗೆ ಒಂದು ರೂಪಾಯಿಯ 5 ನಾಣ್ಯಗಳು ಸಮ.
* 5 ರೂಪಾಯಿಗೆ 2 ರೂಪಾಯಿಯ ಎರಡು ನಾಣ್ಯಗಳು ಮತ್ತು 1 ರೂಪಾಯಿಯ ಒಂದು ನಾಣ್ಯ ಸಮ.

5 ರೂಪಾಯಿ ಎಂದರೆ 500 ಪೈಸೆಗಳು



* 10 ರೂಪಾಯಿಗೆ 5 ರೂಪಾಯಿಯ ಎರಡು ನಾಣ್ಯಗಳು ಸಮ.

* 10 ರೂಪಾಯಿಗೆ 2 ರೂಪಾಯಿಯ ಐದು ನಾಣ್ಯಗಳು ಸಮ.

* 10 ರೂಪಾಯಿಗೆ 1 ರೂಪಾಯಿಯ ಹತ್ತು ನಾಣ್ಯಗಳು ಸಮ.

10 ರೂಪಾಯಿ ಎಂದರೆ 1000 ಪೈಸೆಗಳು

ಅಭ್ಯಾಸ 9.1

ಬಿಟ್ಟ ಸ್ಥಳ ತುಂಬು.

1. 1 ರೂಪಾಯಿಯಲ್ಲಿ 50 ಪೈಸೆಯ ..... ನಾಣ್ಯಗಳಿವೆ.

2. 2 ರೂಪಾಯಿಯಲ್ಲಿ 50 ಪೈಸೆಯ ..... ನಾಣ್ಯಗಳಿವೆ.

3. 2 ರೂಪಾಯಿಯಲ್ಲಿ 1 ರೂಪಾಯಿಯ ..... ನಾಣ್ಯ ಮತ್ತು 50 ಪೈಸೆಯ ..... ನಾಣ್ಯಗಳಿವೆ.


4. 1 ರೂಪಾಯಿ 50 ಪೈಸೆಯಲ್ಲಿ , 50 ಪೈಸೆಯ ..... ನಾಣ್ಯಗಳಿವೆ.

5. 10 ರೂಪಾಯಿಯಲ್ಲಿ 5 ರೂಪಾಯಿಯ ..... ನಾಣ್ಯಗಳಿವೆ.

6. 20 ರೂಪಾಯಿಯಲ್ಲಿ 5 ರೂಪಾಯಿಯ ..... ನಾಣ್ಯಗಳಿವೆ.


NOT TO BE REPUBLISHED @KTBS


ಗೆರೆ ಎಳೆದು ಹೊಂದಿಸು.

@KTBS TO BE REPUBLISHED

ಹಣದ ಮೊಬಲಗನ್ನು ಮೌಖಿಕವಾಗಿ ಹೇಳುವುದು ಮತ್ತು ಬರೆಯುವುದು ಹೇಗೆ ?





NOT TO BE REPUBLISHED © KSEEB

* ಅಂಗಡಿಯವನು ನೋಟ್‌ಪುಸ್ತಕದ ಬೆಲೆಯನ್ನು ಮೌಖಿಕವಾಗಿ 20 ರೂಪಾಯಿ 50 ಪೈಸೆ ಎಂದು ಹೇಳುವನು.

* ಅಕ್ಷರ ರೂಪದಲ್ಲಿ ಇದನ್ನು ಇಪ್ಪತ್ತು ರೂಪಾಯಿ ಮತ್ತು ಐವತ್ತು ಪೈಸೆಗಳು ಎಂದು ಬರೆಯುತ್ತೇವೆ.

* ಸಂಖ್ಯೆ ರೂಪದಲ್ಲಿ ಬರೆಯುವಾಗ, ಮೊದಲು ರೂಪಾಯಿಗಳನ್ನು ಬರೆದು, ಒಂದು ಬಿಂದು (.)ವನ್ನು ಇಟ್ಟು, ನಂತರ ಪೈಸೆಗಳನ್ನು ಬರೆಯುತ್ತೇವೆ. ಆದ್ದರಿಂದ ಸಂಖ್ಯೆರೂಪದಲ್ಲಿ ₹ 20.50 ಎಂದು ಬರೆಯುತ್ತೇವೆ.

ಕ್ರ.ಸಂ.	ಮೌಖಿಕ ರೂಪ	ಅಕ್ಷರ ರೂಪ	ಸಾಂಖ್ಯಿಕ ರೂಪ
1.	20 ರೂಪಾಯಿ 50 ಪೈಸೆ	ಇಪ್ಪತ್ತು ರೂಪಾಯಿ ಮತ್ತು ಐವತ್ತು ಪೈಸೆ	₹ 20.50
2.	75 ಪೈಸೆ	ಎಪ್ಪತ್ತೈದು ಪೈಸೆ	₹ 0.75
3.	1 ರೂಪಾಯಿ	ಒಂದು ರೂಪಾಯಿ	₹ 1.00
4.	10 ರೂಪಾಯಿ 25 ಪೈಸೆ	ಹತ್ತು ರೂಪಾಯಿ ಮತ್ತು ಇಪ್ಪತ್ತೈದು ಪೈಸೆ	₹ 10.25
5.	50 ರೂಪಾಯಿ	ಐವತ್ತು ರೂಪಾಯಿ	₹ 50.00

ನೆನಪಿಡು

* ಭಾರತದಲ್ಲಿ ಹಣದ ಮೂಲಮಾನ ರೂಪಾಯಿ.
* ರೂಪಾಯಿಯ ಚಿಕ್ಕ ಘಟಕ ಪೈಸೆ.
* ರೂಪಾಯಿ ಮತ್ತು ಪೈಸೆ ಇವುಗಳನ್ನು ಶಾಬ್ದಿಕ ರೂಪ ಮತ್ತು ಸಾಂಖ್ಯಿಕ ರೂಪದಲ್ಲಿ ಬರೆಯಬಹುದು.

@KTBS NOT TO BE REPUBLISHED

ಅಭ್ಯಾಸ 9.2

i. ಬಿಟ್ಟ ಸ್ಥಳ ತುಂಬು.

1. ಭಾರತದಲ್ಲಿ ಬಳಕೆಯಲ್ಲಿರುವ ಹಣದ ಮೂಲಮಾನ .....
2. ರೂಪಾಯಿಯ ಚಿಕ್ಕ ಘಟಕ .....
3. ರೂಪಾಯಿಯ ಸಂಕೇತ .....
4. 2 ರೂಪಾಯಿಯ ಸಾಂಖ್ಯಿಕ ರೂಪ .....

ii. ಪ್ರಯತ್ನಿಸು :

ಕ್ರ.ಸಂ.	ಮೌಖಿಕ ರೂಪ	ಶಾಬ್ದಿಕ ರೂಪ	ಸಾಂಖ್ಯಿಕ ರೂಪ
1		ಅರವತ್ತಾರು ಪೈಸೆ	₹ 0.66
2	1 ರೂಪಾಯಿ		₹ 1.00
3	20 ರೂಪಾಯಿ 50 ಪೈಸೆ	ಇಪ್ಪತ್ತು ರೂಪಾಯಿ ಮತ್ತು ಐವತ್ತು ಪೈಸೆ	
4		ಎಂಬತ್ತು ರೂಪಾಯಿ ಮತ್ತು ಎಪ್ಪತ್ತೈದು ಪೈಸೆ	
5	96 ರೂಪಾಯಿ 75 ಪೈಸೆ		

ರೂಪಾಯಿಗಳನ್ನು ಪೈಸೆಗಳಿಗೆ ಪರಿವರ್ತಿಸುವುದು.

1 ರೂಪಾಯಿ = 100 ಪೈಸೆಗಳು ಎಂದು ತಿಳಿದಿರುವೆ.

ಉದಾಹರಣೆಗಳು : (ಕೇವಲ ರೂಪಾಯಿಗಳು ಇದ್ದಾಗ)

2 ರೂಪಾಯಿಗಳು = 2 x 100 = 200 ಪೈಸೆಗಳು.

7 ರೂಪಾಯಿಗಳು = 7 x 100 = 700 ಪೈಸೆಗಳು.

8 ರೂಪಾಯಿಗಳು = 8 x 100 = 800 ಪೈಸೆಗಳು.

10 ರೂಪಾಯಿಗಳು 10 x 100 = 1000 ಪೈಸೆಗಳು.

ರೂಪಾಯಿಗಳು	100 ರಿಂದ ಗುಣಿಸು	ಪೈಸೆಗಳು
3	3 x 100	300 ಪೈಸೆಗಳು
5	5 x 100	500 ಪೈಸೆಗಳು
6	6 x 100	600 ಪೈಸೆಗಳು
9	9 x 100	900 ಪೈಸೆಗಳು

@KTBS NOT TO BE REPUBLISHED

ರೂಪಾಯಿ / ರೂಪಾಯಿಗಳನ್ನು ಪೈಸೆಗಳಿಗೆ ಪರಿವರ್ತಿಸಬೇಕಾದರೆ
100 ರಿಂದ ಗುಣಿಸು.

ರೂಪಾಯಿ ಮತ್ತು ಪೈಸೆಗಳೆರಡೂ ಇದ್ದಾಗ ಪೈಸೆಗಳಿಗೆ ಪರಿವರ್ತಿಸುವುದು.

ಉದಾಹರಣೆಗಳು :

1 ರೂಪಾಯಿ 25 ಪೈಸೆಗಳು = (1 x 100) + 25

= 100ಪೈ + 25 ಪೈ

= 125 ಪೈಸೆಗಳು

5 ರೂಪಾಯಿ 50 ಪೈಸೆಗಳು = (5 x 100) + 50

= 500ಪೈ + 50 ಪೈ

= 550 ಪೈಸೆಗಳು

ರೂಪಾಯಿ ಮತ್ತು ಪೈಸೆಗಳು	ಪೈಸೆಗೆ ಪರಿವರ್ತಿಸುವ ವಿಧಾನ	ಪೈಸೆಗಳು
3 ರೂಪಾಯಿ 50 ಪೈಸೆಗಳು	(3 X 100) + 50 300ಪೈ + 50 ಪೈ 350 ಪೈಸೆಗಳು	350 ಪೈಸೆಗಳು
9 ರೂಪಾಯಿ 5 ಪೈಸೆಗಳು	(9 X 100) + 5 900ಪೈ + 5 ಪೈ 905 ಪೈಸೆಗಳು	905 ಪೈಸೆಗಳು

ರೂಪಾಯಿ ಮತ್ತು ಪೈಸೆಗಳನ್ನು ಕೊಟ್ಟಾಗ ಪೈಸೆಗಳಿಗೆ ಪರಿವರ್ತಿಸಬೇಕಾದರೆ, ರೂಪಾಯಿಯನ್ನು ಮಾತ್ರ 100 ರಿಂದ ಗುಣಿಸಿ, ಗುಣಲಬ್ಧಕ್ಕೆ ಪೈಸೆಗಳನ್ನು ಕೂಡಿಸು.

ಮನಸ್ಸಿನಲ್ಲಿಯೇ ರೂಪಾಯಿಗಳನ್ನು ಪೈಸೆಗೆ ಪರಿವರ್ತಿಸುವುದನ್ನು ತಿಳಿ.

ಕ್ರ.ಸಂ.	ರೂಪಾಯಿಗಳು	ಪೈಸೆಗಳು
1.	₹ 5.00	500ಪೈಸೆಗಳು
2.	₹ 3.25	325 ಪೈಸೆಗಳು
3.	₹ 6.55	655 ಪೈಸೆಗಳು
4.	₹ 4.05	405 ಪೈಸೆಗಳು
5.	₹ 6.19	619 ಪೈಸೆಗಳು
6.	₹ 5.06	506 ಪೈಸೆಗಳು
7.	₹ 0.95	95 ಪೈಸೆಗಳು
8.	₹ 9.90	990 ಪೈಸೆಗಳು

ರೂಪಾಯಿ ಮತ್ತು ಪೈಸೆಗಳ ಮಧ್ಯದಲ್ಲಿರುವ ಬಿಂದುವನ್ನು ತೆಗೆದು ಬಿಟ್ಟರೆ ಉಳಿಯುವ ಸಂಖ್ಯೆಯೇ ಪೈಸೆಗಳಾಗುತ್ತವೆ.

@KTBS NOT TO BE REPUBLISHED

ಅಭ್ಯಾಸ 9.3

i. ಕೆಳಗಿನವುಗಳನ್ನು ಪೈಸೆಗಳಿಗೆ ಪರಿವರ್ತಿಸು.

1) ₹ 3.00 = ...

2) ₹ 7.00 = ...

3) ₹ 8.00 = ...

4) ₹ 4.00 = ...

5) ₹ 6.00 = ...

6) ₹ 2.25 = ...

7) ₹ 6.25 = ...

8) ₹ 5.25 = ...

9) ₹ 7.75 = ...

10) ₹ 9.50 = ...

ii. ಬಿಟ್ಟ ಸ್ಥಳ ತುಂಬು.

ಕ್ರ.ಸಂ.	ರೂಪಾಯಿ / ಪೈಸೆಗಳು	ಪೈಸೆಗಳು
1)	1 ರೂಪಾಯಿ	100 ಪೈಸೆಗಳು
2)	5 ರೂಪಾಯಿಗಳು	
3)	2 ರೂಪಾಯಿಗಳು	
4)	1 ರೂಪಾಯಿ 75 ಪೈಸೆಗಳು	
5)	8 ರೂಪಾಯಿ 90 ಪೈಸೆಗಳು	
6)	5 ರೂಪಾಯಿ 15 ಪೈಸೆಗಳು	
7)	7 ರೂಪಾಯಿ 25 ಪೈಸೆಗಳು	
8)	8 ರೂಪಾಯಿ 50 ಪೈಸೆಗಳು	

@KTBS NOT TO BE REPUBLISHED

ಹಣದ ಸಂಕಲನ ಮತ್ತು ವ್ಯವಕಲನ

ಅಂಕಣದಲ್ಲಿ ರೂಪಾಯಿ ಮತ್ತು ಪೈಸೆ ಬರೆದು ಕೂಡುವುದು ಮತ್ತು ಕಳೆಯುವುದನ್ನು ಹೇಗೆಂದು ತಿಳಿ.

ಉದಾಹರಣೆ 1 : 26 ರೂಪಾಯಿ 40 ಪೈಸೆ ಮತ್ತು 31 ರೂಪಾಯಿ 20 ಪೈಸೆ ಇವುಗಳನ್ನು ಕೂಡಿಸು.

ರೂಪಾಯಿ	ಪೈಸೆ
26	40
+ 31	20
57	**60**

ಉತ್ತರ : ₹57.60

* ರೂಪಾಯಿ ಅಂಕಣದಲ್ಲಿ ರೂಪಾಯಿ ಬರೆ.
* ಪೈಸೆಅಂಕಣದಲ್ಲಿ ಪೈಸೆ ಬರೆ.
* ಪೈಸೆಯನ್ನು ಪೈಸೆ ಜೊತೆ ಕೂಡಿ, ಪೈಸೆ ಅಂಕಣದಲ್ಲಿ ಬರೆ.
* ರೂಪಾಯಿಯ ಜೊತೆ, ರೂಪಾಯಿ ಕೂಡಿ ರೂಪಾಯಿ ಅಂಕಣದಲ್ಲಿ ಬರೆ.

ಉದಾಹರಣೆ 2 :

₹ 42 . 40
₹ 36 . 20
₹ 78 . 60

* ಸಂಖ್ಯೆಗಳನ್ನು ಕೂಡಿದ ಹಾಗೆ ಕೂಡು.
* ಬಿಂದುವಿನ ಕೆಳಗೆ ಬಿಂದು ಬರೆ.
* ಉತ್ತರಕ್ಕೆ ₹ ಎಂದು ಬರೆ.

ಉದಾಹರಣೆ 3 : 21 ರೂಪಾಯಿ 30 ಪೈಸೆಯನ್ನು 64 ರೂಪಾಯಿ 80 ಪೈಸೆಯಿಂದ ಕಳೆ.

ರೂಪಾಯಿ	ಪೈಸೆ
64	80
_ 21	30
43	**50**

ಉತ್ತರ : ₹43.50

* ರೂಪಾಯಿ ಅಂಕಣದಲ್ಲಿ ರೂಪಾಯಿ ಬರೆ.
* ಪೈಸೆ ಅಂಕಣದಲ್ಲಿ ಪೈಸೆ ಬರೆ.
* ಪೈಸೆಯನ್ನು ಪೈಸೆಯಿಂದ ಕಳೆದು, ಪೈಸೆ ಅಂಕಣದಲ್ಲಿ ಬರೆ.
* ರೂಪಾಯಿಯನ್ನು, ರೂಪಾಯಿಯಿಂದ ಕಳೆದು, ರೂಪಾಯಿ ಅಂಕಣದಲ್ಲಿ ಬರೆ.

@KTBS NOT TO BE REPUBLISHED

ಉದಾಹರಣೆ 4 : ₹ 80.75ರಲ್ಲಿ ₹ 35.60ನ್ನು ಕಳೆ.

₹ 80	.	75
₹ 35	.	60
₹ 45	**.**	**15**

* ಸಂಖ್ಯೆಗಳನ್ನು ಕಳೆಯುವ ಹಾಗೆ ಕಳೆ.
* ಬಿಂದುವಿನ ಕೆಳಗೆ ಬಿಂದು ಇಡು.
* ಉತ್ತರಕ್ಕೆ ₹ ಎಂದು ಬರೆ.

ಚಿತ್ರದಲ್ಲಿ ಕೊಟ್ಟಿರುವ ವಸ್ತು ಹಾಗೂ ಅದರ ಬೆಲೆ ಗಮನಿಸು.



₹ 2.00



₹ 18.25



₹ 13.75



₹ 40.00



₹ 20.50



₹ 25.50

NOT TO BE REPUBLISHED @KTBS

ನೀನು ಹಾಗೂ ನಿನ್ನ ಇಬ್ಬರು ಗೆಳೆಯರು ಕೆಳಗೆ ಬರೆದಿರುವ ಹಾಗೆ ಸಾಮಗ್ರಿ ಖರೀದಿಸಿರುವಿರಿ. ಚಿತ್ರದಲ್ಲಿರುವ ಬೆಲೆ ಗಮನಿಸಿ, ಕೂಡಿರುವುದು ಸರಿಯಾಗಿದೆಯೆ ? ಮಾಡಿ ತಿಳಿ.

* ಒಂದು ಪೆನ್ಸಿಲ್ ಮತ್ತು ಒಂದು ನೋಟ್ ಪುಸ್ತಕದ ಒಟ್ಟು ಬೆಲೆ.

	ರೂಪಾಯಿ	ಪೈಸೆ
	2	00
+	18	25
	20	25

* ಒಂದು ಮಸಿ ಬಾಟಲಿ ಮತ್ತು ಒಂದು ನೋಟ್ ಪುಸ್ತಕದ ಒಟ್ಟು ಬೆಲೆ.

	ರೂಪಾಯಿ	ಪೈಸೆ
	20	50
+	18	25
	38	75

* ಒಂದು ಮಸಿ ಕುಡಿಕೆ ಮತ್ತು ಪೆನ್ನಿನ ಒಟ್ಟು ಬೆಲೆ ಎಷ್ಟು ? ಲೆಕ್ಕ ಮಾಡು.

	ರೂಪಾಯಿ	ಪೈಸೆ
	20	50
+	25	50
	46	00

ಶಾಬ್ದಿಕ ಸಮಸ್ಯೆಗಳು (ವಿವರಣಾತ್ಮಕ)

ಕೆಳಗಿನ ಲೆಕ್ಕಗಳನ್ನು ಓದು. ಸಂಖ್ಯೆಯ ಲೆಕ್ಕಗಳನ್ನು ಬಿಡಿಸುವುದು ಹೇಗೆಂದು ತಿಳಿ.

ಉದಾಹರಣೆ 1 :

ಅಂಗಡಿಯೊಂದರಲ್ಲಿ ಮೇರಿ ₹ 10.25ಕ್ಕೆ ಒಂದು ಪೆನ್ನು, ₹ 18.25ಕ್ಕೆ ಒಂದು ನೋಟ್ ಪುಸ್ತಕ ಕೊಂಡರೆ ಖರ್ಚು ಮಾಡಿದ ಒಟ್ಟು ಹಣ ಎಷ್ಟು ?

* ಪೆನ್ನಿಗಾಗಿ ಖರ್ಚು ಮಾಡಿದ ಹಣ = ₹ 10 . 25
* ನೋಟ್ ಪುಸ್ತಕಕ್ಕಾಗಿ ಖರ್ಚು ಮಾಡಿದ ಹಣ = + ₹ 18 . 25
* ಖರ್ಚು ಮಾಡಿದ ಒಟ್ಟು ಹಣ = ₹ 28 . 50

ಉದಾಹರಣೆ 2 :

ಭಾವನಾ ಹತ್ತಿರ ಇರುವ ಹಣದ ಕುಡಿಕೆಯಲ್ಲಿ ₹ 56.75 ಇದೆ. ಅವಳ ಅಜ್ಜ ಕೊಟ್ಟಿರುವ 43.15ನ್ನು ಹಣದ ಕುಡಿಕೆಗೆ ಹಾಕಿದರೆ ಕುಡಿಕೆಯಲ್ಲಿರುವ ಒಟ್ಟು ಹಣ ಎಷ್ಟು ?

* ಪ್ರಾರಂಭದಲ್ಲಿ ಕುಡಿಕೆಯಲ್ಲಿರುವ ಹಣ = ₹ 56 . 75
* ಕುಡಿಕೆಗೆ ಹಾಕಿದ ಅಜ್ಜ ಕೊಟ್ಟಿರುವ ಹಣ = + ₹ 43 . 15
* ಕುಡಿಕೆಯಲ್ಲಿರುವ ಒಟ್ಟು ಹಣ ₹ 99 . 90

©KTBS NOT TO BE REPUBLISHED

ಉದಾಹರಣೆ 3 :

ರಾಜುವಿನ ಹತ್ತಿರ ₹ 85.50 ಹಣವಿದೆ. ಈ ಹಣದಲ್ಲಿ ₹ 25.20 ಕೊಟ್ಟು ಚೆಂಡು ತಂದ ನಂತರ ರಾಜುವಿನ ಹತ್ತಿರ ಉಳಿಯುವ ಹಣ ಎಷ್ಟು ?

* ರಾಜುವಿನಲ್ಲಿರುವ ಹಣ = ₹ 85 . 50
* ಚೆಂಡಿಗಾಗಿ ಖರ್ಚು ಮಾಡಿದ ಹಣ = - ₹ 25 . 20
* ಉಳಿಯುವ ಹಣ = ₹ 60 . 30

ಶಾಬ್ದಿಕ ಲೆಕ್ಕಗಳನ್ನು ಬಿಡಿಸುವಾಗ....

1. ಕೊಟ್ಟಿರುವ ಸಂಗತಿಗಳನ್ನು ಹೇಳಿಕೆಗಳಾಗಿ ಬರೆದುಕೊ.
2. ಒಟ್ಟು ಎಷ್ಟು ಎಂದು ಕೇಳಿದಾಗ ಕೂಡುವ ಕ್ರಿಯೆ ಮಾಡು.
3. ಉಳಿಯುವುದೆಷ್ಟು , ಎಷ್ಟು ಹೆಚ್ಚಿದೆ, ಎಷ್ಟು ಕಡಿಮೆ ಇದೆ ಎಂದು ಕೇಳಿದಾಗ ಕಳೆಯುವ ಕ್ರಿಯೆ ಮಾಡು.

ಅಭ್ಯಾಸ 9.4

1. ಕೆಳಗಿನ ಲೆಕ್ಕಗಳನ್ನು ಮಾಡು.

1)

ರೂಪಾಯಿ	ಪೈಸೆ
35	67
+ 21	32

2)

ರೂಪಾಯಿ	ಪೈಸೆ
44	36
+ 52	61

3)

ರೂಪಾಯಿ	ಪೈಸೆ
88	05
+ 11	90

4)

ರೂಪಾಯಿ	ಪೈಸೆ
130	20
+ 61	70

5)

ರೂಪಾಯಿ	ಪೈಸೆ
200	15
+ 65	32

6)

ರೂಪಾಯಿ	ಪೈಸೆ
450	90
+ 35	05

7)

ರೂಪಾಯಿ	ಪೈಸೆ
475	00
+ 20	75

8)

ರೂಪಾಯಿ	ಪೈಸೆ
820	25
+ 25	50

9)

ರೂಪಾಯಿ	ಪೈಸೆ
325	75
+ 25	00

10)

ರೂಪಾಯಿ	ಪೈಸೆ
320	25
+ 425	25

11. ಕೆಳಗಿನ ಲೆಕ್ಕಗಳನ್ನು ಮಾಡು.

1)

ರೂಪಾಯಿ	ಪೈಸೆ
75	50
- 30	15

2)

ರೂಪಾಯಿ	ಪೈಸೆ
90	75
- 45	25

3)

ರೂಪಾಯಿ	ಪೈಸೆ
37	50
- 25	30

@KSEEBS NOT TO BE REPUBLISHED

4)

ರೂಪಾಯಿ	ಪೈಸೆ
99	99
– 55	55

5)

ರೂಪಾಯಿ	ಪೈಸೆ
85	75
– 50	65

6)

ರೂಪಾಯಿ	ಪೈಸೆ
79	80
– 35	50

7)

ರೂಪಾಯಿ	ಪೈಸೆ
120	25
– 50	20

8)

ರೂಪಾಯಿ	ಪೈಸೆ
135	80
– 50	75

9)

ರೂಪಾಯಿ	ಪೈಸೆ
100	75
– 75	25

10)

ರೂಪಾಯಿ	ಪೈಸೆ
75	25
– 50	20

@KTBS NOT TO BE REPUBLISHED

iii. ಶಾಬ್ದಿಕ ಸಮಸ್ಯೆಗಳನ್ನು ಬಿಡಿಸು.

1.ಸಂಜು ಚಾಕಲೇಟ್‌ಗಾಗಿ ₹ 19.25 ಮತ್ತು ಬಿಸ್ಕತ್‌ಗಾಗಿ ₹ 6.25 ಖರ್ಚು ಮಾಡಿದರೆ ಅವನು ಖರ್ಚು ಮಾಡಿದ ಒಟ್ಟು ಹಣ ಎಷ್ಟು ?

* ಚಾಕಲೇಟ್‌ಗಾಗಿ ಖರ್ಚು ಮಾಡಿದ ಹಣ =
* ಬಿಸ್ಕತ್‌ಗಾಗಿ ಖರ್ಚು ಮಾಡಿದ ಹಣ =
* ಒಟ್ಟು ಖರ್ಚು ಮಾಡಿದ ಹಣ =

2. ಸೋನಾಲಿಗೆ ಅವಳ ತಂದೆ ₹ 80 ಕೊಟ್ಟಿದ್ದರು. ಈಗ ಅವಳ ತಾಯಿ ₹ 25.25 ಕೊಟ್ಟರೆ ಸೋನಾಲಿ ಹತ್ತಿರ ಇರುವ ಒಟ್ಟು ಹಣ ಎಷ್ಟು ?

* ತಂದೆ ಕೊಟ್ಟ ಹಣ =

* ತಾಯಿ ಕೊಟ್ಟ ಹಣ =

* ಒಟ್ಟು ಹಣ =

3. ಶೇಖರನು ₹ 7.25 ಕೊಟ್ಟು ಐಸ್ ಕ್ರೀಮ್ ಮತ್ತು ₹ 5.25 ಕೊಟ್ಟು ಪೆನ್ನು ಕೊಂಡರೆ ಶೇಖರ ಖರ್ಚು ಮಾಡಿದ ಒಟ್ಟು ಹಣ ಎಷ್ಟು ?

4. ರಾಧಾ ಚಿತ್ರಕಲಾ ಸ್ಪರ್ಧೆಯಲ್ಲಿ ₹ 75.50 ಮೌಲ್ಯದ ಬಣ್ಣ ಹಾಕುವ ಪುಸ್ತಕ ಮತ್ತು ಗಣಿತ ರಸಪ್ರಶ್ನೆ ಸ್ಪರ್ಧೆಯಲ್ಲಿ ₹ 20.50 ಮೌಲ್ಯದ ಗಣಿತ ಪುಸ್ತಕ ಬಹುಮಾನವಾಗಿ ಪಡೆದರೆ, ಬಹುಮಾನವಾಗಿ ಪಡೆದ ಪುಸ್ತಕಗಳ ಒಟ್ಟು ಮೌಲ್ಯ ಎಷ್ಟು ?

5. ಮಂಜು ₹ 38.25 ಕೊಟ್ಟು ಡ್ರಾಯಿಂಗ್ ಹಾಳೆಗಳನ್ನು ಮತ್ತು ₹ 20.50 ಕೊಟ್ಟು ಕ್ರಯಾನ್ಸ್ ಪೆನ್ಸಿಲ್ ತಂದರೆ ಮಂಜು ಖರ್ಚು ಮಾಡಿದ ಒಟ್ಟು ಹಣವೆಷ್ಟು ?

@KTBS NOT TO BE REPUBLISHED

vi. ಶಾಬ್ಧಿಕ ಸಮಸ್ಯೆಗಳನ್ನು ಬಿಡಿಸು.

1.ರೇಖಾ ತನ್ನಲ್ಲಿರುವ ₹ 125.50 ಹಣದಲ್ಲಿ ₹ 13.75ನ್ನು ಐಸ್‌ಕ್ರೀಮ್‌ಗಾಗಿ ಖರ್ಚು ಮಾಡಿದರೆ ಅವಳ ಹತ್ತಿರ ಉಳಿಯುವ ಹಣ ಎಷ್ಟು ?

* ರೇಖಾಳ ಹತ್ತಿರ ಇರುವ ಹಣ =

* ಐಸ್ ಕ್ರೀಮ್‌ಗಾಗಿ ಖರ್ಚು ಮಾಡಿದ ಹಣ =

* ಉಳಿಯುವ ಹಣ =

2. ಶಶಾಂಕ ತನ್ನ ಹತ್ತಿರ ಇರುವ ₹ 125.50 ಹಣದಲ್ಲಿ ₹ 75.25 ಖರ್ಚು ಮಾಡಿ ತಂಗಿಗೆ ಗೊಂಬೆಯೊಂದನ್ನು ಕೊಡಿಸಿದರೆ ಶಶಾಂಕನ ಹತ್ತಿರ ಉಳಿಯುವ ಹಣವೆಷ್ಟು ?

* ಶಶಾಂಕನ ಹತ್ತಿರ ಇರುವ ಹಣ =

* ಗೊಂಬೆಗಾಗಿ ಖರ್ಚು ಮಾಡಿದ ಹಣ =

* ಉಳಿಯುವ ಹಣ =


3. ಜಯಾ ತನ್ನ ಹತ್ತಿರ ಇರುವ ₹ 20 ರಲ್ಲಿ ₹ 15.50 ಕೊಟ್ಟು ಟೊಮೆಟೊ ಕೊಂಡರೆ ಜಯಾಳ ಹತ್ತಿರ ಉಳಿಯುವ ಹಣ ಎಷ್ಟು ?

4. ನಿನ್ನ ಹತ್ತಿರ ಇರುವ ₹ 100.75 ಹಣದಲ್ಲಿ ಹುಟ್ಟು ಹಬ್ಬಕ್ಕಾಗಿ ₹ 50.25 ಬೆಲೆಯ ಚಾಕಲೇಟ್ ಕೊಂಡರೆ ನಿನ್ನ ಹತ್ತಿರ ಉಳಿಯುವ ಹಣವೆಷ್ಟು ?

@KTBS NOT TO BE REPUBLISHED

5. ನಿನ್ನ ತಂದೆ ನಿನಗೆ ₹ 50.75 ಕೊಟ್ಟಿದ್ದಾರೆ ಮತ್ತು ನಿನ್ನ ತಮ್ಮನಿಗೆ ₹ 25.50 ಕೊಟ್ಟಿದ್ದಾರೆ. ಹಾಗಾದರೆ ನೀನು ತಮ್ಮನಿಗಿಂತ ಹೆಚ್ಚಾಗಿ ಪಡೆದ ಹಣವೆಷ್ಟು ?

ದರ ಪಟ್ಟಿ



ದರ ಪಟ್ಟಿ	
ವಸ್ತುವಿನ ವಿವರ	ಬೆಲೆ 1 ಕಿ.ಗ್ರಾಂ ಗೆ
ಅಕ್ಕಿ	₹31.00
ಸಕ್ಕರೆ	₹28.00
ತೊಗರಿ ಬೇಳೆ	₹62.00
ಗೋಧಿ	₹30.00

NOT TO BE REPUBLISHED



ಇದರ ಉಪಯೋಗ ವೇನಪ್ಪಾ ?

ಖರೀದಿಸಿದ ವಸ್ತುವಿಗೆ ಎಷ್ಟು ಹಣ ಕೊಡಬೇಕು ಎಂದು ನಾವೇ ತಿಳಿದು ಕೊಳ್ಳಬಹುದು ನೋಡು, 1 ಕಿ.ಗ್ರಾಂ ಅಕ್ಕಿಗೆ 31 ರೂಪಾಯಿ.





ಈಗ ನೀನು, ಒಂದು ಕಿ.ಗ್ರಾಂ ಸಕ್ಕರೆಗೆ ಎಷ್ಟು ಬೆಲೆ ಎಂದು ಹೇಳು ನೋಡೋಣ.


ಹೋ! ಗೊತ್ತಾಯ್ತು 28 ರೂಪಾಯಿ



ಪ್ರತಿಯೊಂದು ಅಂಗಡಿಯಲ್ಲಿ ದರಪಟ್ಟಿಯನ್ನು ಪ್ರದರ್ಶಿಸಿರುತ್ತಾರೆ. ಇದರಿಂದ ನಮಗೆ ವಸ್ತುಗಳ ಬೆಲೆಯನ್ನು ತಿಳಿದು, ಬೇಕಿರುವ ವಸ್ತುಗಳನ್ನು ಆ ಅಂಗಡಿಯಿಂದ ಖರೀದಿಸಲು ಸಹಾಯವಾಗುತ್ತದೆ.

ಈಗ ಈ ಬೇಕರಿಯಲ್ಲಿ ತೂಗು ಹಾಕಿರುವ ದರ ಪಟ್ಟಿಯನ್ನು ಗಮನಿಸು.

ಆಯ್ಯಂಗಾರ್ ಬೇಕರಿ ಉಡುಪಿ



ದರ ಪಟ್ಟಿ		
ವಸ್ತು	ಪರಿಮಾಣ	ಬೆಲೆ
ಬ್ರೆಡ್	1 ಪೌಂಡ್	₹12.00
ಕೇಕ್	1	₹5.50
ಚಾಕಲೇಟ್	1	₹2.00
ತರಕಾರಿ ಪಪ್ಸ್	1	₹10.00
ಮೊಟ್ಟೆ ಪಪ್ಸ್	1	₹11.00

© KTBS NOT TO BE REPUBLISHED

ಪ್ರೀತಿಯು ಖರೀದಿಸಲು ಬಯಸಿರುವ ಕೆಲವು ತಿಂಡಿಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಅವುಗಳ ಬೆಲೆ ತಿಳಿದು ಕೊಳ್ಳಲು ಅವಳಿಗೆ ಸಹಾಯ ಮಾಡು.

1 ತರಕಾರಿ ಪಪ್ಸ್ – .....

1 ಪೌಂಡ್ ಬ್ರೆಡ್ – .....

1 ಚಾಕಲೇಟ್ – .....

ಸರಳ ರಶೀದಿ

ರಶೀದಿ

ಶ್ರೀ ಟೆಕ್ಸ್ ಟೈಲ್ಸ್ — KST001234

ಎಂ. ಜಿ. ರಸ್ತೆ, ಕಲಬುರ್ಗಿ — CST007568

ರಶೀದಿ ಸಂಖ್ಯೆ : 15702 ದಿನಾಂಕ : 10–04–2016

ಹೆಸರು : ರಾಜೇಂದ್ರ

ಕ್ರ.ಸಂ.	ವಸ್ತುಗಳ ವಿವರ	ಪರಿಮಾಣ	ಒಂದರ ಬೆಲೆ	ಒಟ್ಟು ಬೆಲೆ
1	ಅಂಗಿ	1	₹ 250.00	₹ 250.00
2.	ಸೀರೆ	1	₹ 725.00	₹ 725.00
3.	ಚೂಡಿದಾರ	1	₹ 375.00	₹ 375.00
	ಒಟ್ಟು	3		₹ 1350.00
			VAT	₹ 70.00
			ಮೊತ್ತ	₹ 1420.00

(ಅಕ್ಷರಗಳಲ್ಲಿ : ಒಂದು ಸಾವಿರದ ನಾಲ್ಕು ನೂರಾ ಇಪ್ಪತ್ತು ರೂಪಾಯಿ ಮಾತ್ರ)

ಮಾಲೀಕನ ಸಹಿ

NOT TO BE REPUBLISHED @KTBS

ಈ ರಶೀದಿಯಿಂದ ತಿಳಿಯುವುದೇನೆಂದರೆ.

* ಅಂಗಡಿಯ ಹೆಸರು ಮತ್ತು ವಿಳಾಸ
* ರಶೀದಿ ಸಂಖ್ಯೆ ಮತ್ತು ಖರೀದಿ ದಿನಾಂಕ
* ಗ್ರಾಹಕರ/ಖರೀದಿಸಿದವರ ಹೆಸರು.
* ಖರೀದಿಸಿದ ಪ್ರತೀ ವಸ್ತುವಿನ ಬೆಲೆ ಮತ್ತು ಒಟ್ಟು ಬೆಲೆ
* ಖರೀದಿಸಿದ ಎಲ್ಲಾ ವಸ್ತುಗಳಿಗಾಗಿ ನೀಡಬೇಕಾಗಿರುವ ಒಟ್ಟು ಹಣವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸಿರುವುದು.
* ಅಂಗಡಿ ಮಾಲೀಕನ ಸಹಿ.

ಇಮ್ರಾನ್ ಪುಸ್ತಕದ ಅಂಗಡಿಗೆ ಹೋಗಿ 200 ಪುಟಗಳ 1 ಪುಸ್ತಕ, 100 ಪುಟಗಳ 2 ಪುಸ್ತಕಗಳು ಮತ್ತು 5 ಪೆನ್ಸಿಲ್‌ಗಳನ್ನು ಖರೀದಿಸಿದ.

ಅಂಗಡಿಯಲ್ಲಿ ಕಾಣುವ ದರಪಟ್ಟಿ ಮತ್ತು ಅಂಗಡಿ ಮಾಲೀಕ ನೀಡಿರುವ ರಶೀದಿಗಳನ್ನು ಗಮನಿಸು. ಸರಿಯಾಗಿದೆಯೇ ಎಂದು ಪರಿಶೀಲಿಸು.

ದರ ಪಟ್ಟಿ

ವಸ್ತುಗಳ ವಿವರ	ಒಂದರ ಬೆಲೆ
200 ಪುಟದ ಪುಸ್ತಕ	₹30–00
100 ಪುಟದ ಪುಸ್ತಕ	₹ 15–00
ರಬ್ಬರ್	₹ 5–00
ಪೆನ್	₹ 10–00
ಪೆನ್ಸಿಲ್	₹ 4–00

ರಶೀದಿ
ರಾಜಾರಾಮ್ ಪುಸ್ತಕ ಮಳಿಗೆ
ಶಿವಮೊಗ್ಗ

KST-0243
CST-04567

ರಶೀದಿ ಸಂಖ್ಯೆ : 453 ದಿನಾಂಕ : 15–03–16
ಹೆಸರು : ಇಮ್ರಾನ್

ಕ್ರ.ಸಂ.	ವಸ್ತುಗಳ ವಿವರ	ಪರಿಮಾಣ	ಒಂದರ ಬೆಲೆ	ಒಟ್ಟು ಬೆಲೆ
1.	200 ಪುಟದ ನೋಟ್ ಪುಸ್ತಕ	1	₹ 30.00	₹ 30.00
2.	100 ಪುಟದ ನೋಟ್ ಪುಸ್ತಕ	2	₹ 15.00	₹ 30.00
3.	ಪೆನ್ಸಿಲ್	5	₹ 4.00	₹ 20.00
	VAT 4%			₹ 3.20
	ಒಟ್ಟು	–		**₹ 83.20**

(ಅಕ್ಷರಗಳಲ್ಲಿ : ಎಂಭತ್ಮೂರು ರೂಪಾಯಿ ಇಪ್ಪತ್ತು ಪೈಸೆ ಮಾತ್ರ)

ಅಂಗಡಿ ಮಾಲೀಕನ ಸಹಿ.

@KTBS NOT TO BE REPUBLISHED

ಅಭ್ಯಾಸ 9.5

ಬಿಟ್ಟ ಸ್ಥಳ ತುಂಬು.

1. ಅಂಗಡಿಯ ಮಾಲೀಕನಿಂದ ಪಡೆದ, ಖರೀದಿಸಿದ ವಸ್ತುಗಳ ವಿವರಗಳನ್ನು ಹೊಂದಿರುವ ಚೀಟಿಗೆ ..... ಎನ್ನುತ್ತಾರೆ.

2. ಅಂಗಡಿಯಲ್ಲಿ ತೂಗು ಹಾಕಲಾಗಿರುವ ಪ್ರತಿ ವಸ್ತುಗಳ ಬೆಲೆಯನ್ನು ಸೂಚಿಸುವ ಬೋರ್ಡ್‌ಗೆ ..... ಎನ್ನುತ್ತಾರೆ.

3. ರಶೀದಿಯಲ್ಲಿ, ನೀಡಬೇಕಾಗಿರುವ ಒಟ್ಟು ಹಣವನ್ನು ಅಂಕಿ ಮತ್ತು ..... ಗಳಲ್ಲಿ ನಮೂದಿಸಲಾಗಿರುತ್ತದೆ.

*** ಈ ರಶೀದಿಯನ್ನು ಗಮನಿಸಿ, ಮುಂದೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸು.**

@KTBS NOT TO BE REPUBLISHED

ರಶೀದಿ

ಜಗದಂಬ ಟೆಕ್ಸ್‌ಟೈಲ್ಸ್
ಬೆಂಗಳೂರು

KST-0453
CST-06567

ರಶೀದಿ ಸಂಖ್ಯೆ : 453 ದಿನಾಂಕ : 15–03–16
ಹೆಸರು : ಇಮ್ರಾನ್

ಕ್ರ.ಸಂ.	ವಸ್ತುಗಳ ವಿವರ	ಪರಿಮಾಣ	ಒಂದರ ಬೆಲೆ	ಒಟ್ಟು ಬೆಲೆ
1.	ಸೀರೆ	1	₹ 450.00	₹ 450.00
2.	ಬ್ಲೌಸ್ ಪೀಸ್	2	₹ 25.00	₹ 50.00
3.	ಕರವಸ್ತ್ರ	5	₹ 10.00	₹ 50.00
		VAT 4%		₹ 22.50
	ಒಟ್ಟು	–		**₹ 572.50**

(ಅಕ್ಷರಗಳಲ್ಲಿ : ಐದು ನೂರುಎಪ್ಪತ್ತೆರಡು ರೂಪಾಯಿ ಐವತ್ತು ಪೈಸೆ ಮಾತ್ರ)

ಅಂಗಡಿ ಮಾಲೀಕನ ಸಹಿ.

1. ಗ್ರಾಹಕರ ಹೆಸರೇನು ? .....

2. ಖರೀದಿಸಿದ ಸೀರೆಯ ಬೆಲೆ ಎಷ್ಟು ? .....

3. ಒಂದು ಕರವಸ್ತ್ರದ ಬೆಲೆ ಎಷ್ಟು ? .....

4. ಅಂಗಡಿ ಮಾಲಿಕನಿಗೆ ನೀಡಬೇಕಾಗಿರುವ ಒಟ್ಟು ಹಣ ಎಷ್ಟು ? .....

5. ರಶೀದಿಯ ಸಂಖ್ಯೆ ಎಷ್ಟು ? .....

ಚಟುವಟಿಕೆ : ನಿನ್ನ ಮನೆಯಲ್ಲಿ ಲಭ್ಯವಿರುವ ರಶೀದಿಗಳನ್ನು ಸಂಗ್ರಹಿಸು ವಿವರಗಳನ್ನು ತಿಳಿ.

@KTBS
NOT TO BE REPUBLISHED

ಅಧ್ಯಾಯ–10

ಅಳತೆಗಳು

N2U1V8

ಈ ಅಧ್ಯಾಯವನ್ನು ಕಲಿತ ನಂತರ ನೀನು

* ಅಳತೆಗೆ ನಿರ್ದಿಷ್ಟ ಏಕಮಾನದ ಅಗತ್ಯವನ್ನು ಅರಿಯುವೆ,
* ಅಳತೆಗಳಿಗೆ ಅನುಗುಣವಾಗಿ ಅಳೆಯುವ ಸಾಧನವನ್ನು ಆಯ್ಕೆ ಮಾಡುವೆ,
* ಅಳತೆಯ ಸಾಧನವನ್ನು ಬಳಸಲು ತಿಳಿಯುವೆ,
* ವಸ್ತುಗಳ ಉದ್ದವನ್ನು ಸೆಂಟಿ ಮೀಟರ್ ಮತ್ತು ಮೀಟರ್‌ಗಳಲ್ಲಿ ಅಳೆಯುವ ಕೌಶಲ್ಯವನ್ನು ಪಡೆಯುವೆ,
* ವಸ್ತುಗಳ ಉದ್ದವನ್ನು ಅಂದಾಜಿಸುವೆ,
* ಅಂದಾಜಿಸಿದ ಉದ್ದವನ್ನು ಅಳತೆ ಪಟ್ಟಿಯ ಸಹಾಯದಿಂದ ಅಳೆದು ಪರಿಶೀಲಿಸುವೆ,
* ಅಂದಾಜು ಮತ್ತು ನಿಖರತೆಯಲ್ಲಿನ ವ್ಯತ್ಯಾಸವನ್ನು ಗುರುತಿಸುವೆ,
* ಅನೌಪಚಾರಿಕ ಮಾನಗಳನ್ನು ಬಳಸಿ ವಸ್ತುಗಳನ್ನು ತೂಕ ಮಾಡುವೆ,
* ತೂಕದ ಅಳತೆಯಲ್ಲಿನ ನಿಖರತೆಯನ್ನು ತಿಳಿಯುವೆ,
* ಅನೌಪಚಾರಿಕ ಅಳತೆ ಮಾನಗಳನ್ನು ಬಳಸಿ ವಸ್ತುಗಳ ಸಂಗ್ರಹ ಸಾಮರ್ಥ್ಯ ಅಳೆಯುವೆ,
* ಗಾತ್ರದ ಅಳತೆ ಮಾನಗಳನ್ನು ತಿಳಿಯುವೆ,
* ಕ್ಯಾಲೆಂಡರ್‌ನ ಸಹಾಯದಿಂದ ನಿರ್ದಿಷ್ಟ ದಿನ ಮತ್ತು ದಿನಾಂಕವನ್ನು ಬರೆಯುವೆ,
* ಗಂಟೆಗಳಿಗೆ ಹತ್ತಿರದ ಸಮಯವನ್ನು ನೋಡಲು ಸಮರ್ಥನಾಗುವೆ.
* ದೈನಂದಿನ ಚಟುವಟಿಕೆಗಳನ್ನು ಕಾಲಾನುಕ್ರಮವಾಗಿ ಜೋಡಿಸುವೆ.

© KTBS NOT TO BE REPUBLISHED

ಹಬ್ಬದ ತಯಾರಿ

ಗೌರಿ : ಗಣೇಶ ಹಬ್ಬಕ್ಕೆ ಹೂವು ತರಲು ಜ್ಯೋತಿಯು ಅವಳ ತಂದೆಯ ಜೊತೆಗೆ ಮಾರುಕಟ್ಟೆಗೆ ಹೋಗುತ್ತಾಳೆ. ತಂದೆಯು ಹೂವು ಕೊಳ್ಳುವುದನ್ನು ಗಮನಿಸುತ್ತಾಳೆ.



ಜ್ಯೋತಿ : ಅಪ್ಪ ಇಲ್ಲಿ ನೋಡಿ ಹೂ ತುಂಬಾ ಚೆನ್ನಾಗಿದೆ.

ತಂದೆ : ಯಜಮಾನರೇ ಹೂವು ಕೊಡಿ.

ಹೂವು ಮಾರುವವನು : ಎಷ್ಟು ಬೇಕು ಸ್ವಾಮಿ.

ತಂದೆ : ಒಂದು ಮಾರು ಹೂವು ಬೇಕಿತ್ತು ಬೆಲೆ ಎಷ್ಟು ?

ಹೂವು ಮಾರುವವನ ಮಗ : ಒಂದು ಮಾರಿಗೆ ಹತ್ತು ರೂಪಾಯಿ ಸ್ವಾಮಿ.

ತಂದೆ : ಸರಿ ಒಂದು ಮಾರು ಹೂವು ಕೊಡಿ.

ಹೂವು ಮಾರುವವನ ಮಗ : ಅಪ್ಪಾ ನಾನೇ ಅಳತೇ ಮಾಡುತ್ತೇನೆ.

ತಂದೆ : ಬೇಡ ಮಗೂ ನಿಮ್ಮ ತಂದೆಯವರೇ ಅಳೆಯಲಿ.

ಜ್ಯೋತಿ : ಅಪ್ಪಾಜಿ ಆ ಹುಡಗನೇ ಅಳೆದುಕೊಡಲಿ ಬಿಡಿ.

ತಂದೆ : ಬೇಡ ಮಗು ಅವನ ತಂದೆ ಅಳತೆ ಮಾಡಿದರೆ ಹೆಚ್ಚು ಹೂ ಬರುತ್ತದೆ.

ಜ್ಯೋತಿ : ಅದು ಹೇಗೆ ಇಬ್ಬರೂ ಕೊಡುವುದು ಒಂದು ಮಾರು ಅಳತೆಯ ಹೂವೇ ಅಲ್ಲವೇ

ತಂದೆ : ಸರಿ ಇಬ್ಬರೂ ಒಂದೊಂದು ಮಾರು ಹೂವು ಅಳೆದುಕೊಡಿ

ಜ್ಯೋತಿ : (ಅವುಗಳನ್ನು ಹೋಲಿಸಿ ನೋಡಿ) ಆರೆ, ಇಬ್ಬರೂ ಒಂದು ಮಾರು ಅಳೆದರೂ ಬೇರೆ ಇದೆಯಲ್ಲವೇ?

ತಂದೆ : ಹುಡುಗನ ಅಳತೆಯು ಅವನ ತಂದೆಯ ಅಳತೆಗಿಂತ ಚಿಕ್ಕದಾಗಿದೆ. ಅದಕ್ಕೆ ಅವರ ಕೈಗಳ ಉದ್ದ ಬೇರೆ ಬೇರೆಯಾಗಿರುವುಂದು ಕಾರಣವಾಗಿದೆ.

ಜ್ಯೋತಿ : ಹಾಗಾದರೆ ಯಾರೇ ಅಳೆದರು ಸಮವಾಗಿರುವಂತಹ ಮಾಪನವನ್ನು ಬಳಸಬಹುದಲ್ಲ.

NOT TO BE REPUBLISHED © KTBS

ಅಳತೆ ಹೇಗೆ ? ಎಷ್ಟು ?

ಕುಮಾರ, ರಮ್ಯ, ಸಲ್ಮಾ ಮತ್ತು ಜಾನ್ ಕುತೂಹಲದಿಂದ ಕಪ್ಪುಹಲಗೆಯ ಉದ್ದವನ್ನು ಗೇಣಿನಿಂದ ಅಳೆಯುತ್ತಿದ್ದಾರೆ.



ಶಿಕ್ಷಕರು : ಮಕ್ಕಳೇ, ಏನು ಮಾಡುತ್ತಿರುವಿರಿ ?

ಮಕ್ಕಳು : ಕಪ್ಪು ಹಲಗೆಯ ಉದ್ದವನ್ನು ನಮ್ಮ ಗೇಣಿನಿಂದ ಅಳೆಯುತ್ತಿದ್ದೇವೆ ಗುರುಗಳೇ.

ಶಿಕ್ಷಕರು : ಎಲ್ಲರ ಅಳತೆಯು ಒಂದೇ ಸಮನಾಗಿದೆಯೇ ?

ಮಕ್ಕಳು : ಇಲ್ಲ ಗುರುಗಳೇ.

ಶಿಕ್ಷಕರು : ಹಾಗಾದರೆ ಈ ಅಳತೆ ಪಟ್ಟಿಯನ್ನು ತೆಗೆದುಕೊಳ್ಳಿ. ಎಲ್ಲರೂ ಈ ಅಳತೆ ಪಟ್ಟಿಯಿಂದ ಕಪ್ಪು ಹಲಗೆಯ ಉದ್ದವನ್ನು ಅಳೆದು, ಕೋಷ್ಟಕವನ್ನು ಭರ್ತಿ ಮಾಡಿ.

© KTBS NOT TO BE REPUBLISHED

ವಿದ್ಯಾರ್ಥಿ ಹೆಸರು	ಅಳತೆ ಪಟ್ಟಿಯಿಂದ ಅಳೆದಾಗ
ಕುಮಾರ	20 ಬಾರಿ
ಸಲ್ಮಾ	20 ಬಾರಿ
ರಮ್ಯ	20 ಬಾರಿ
ಜಾನ್	20 ಬಾರಿ

ಅಳತೆಗಳನ್ನು ಗಮನಿಸು. ಎಲ್ಲರ ಅಳತೆಗಳು ಒಂದೇ ಸಮನಾಗಿರಲು ಕಾರಣವೇನು? ಯೋಚಿಸು.

ಎಲ್ಲಾ ವಿದ್ಯಾರ್ಥಿಗಳು ಒಂದೇ ಅಳತೆಯ ಮಾಪಕವನ್ನು ಬಳಸಿರುವುದರಿಂದ ಎಲ್ಲರ ಅಳತೆಗಳು ಸಮನಾಗಿವೆ.

ಅಳತೆ ಪಟ್ಟಿಯನ್ನು ಗಮನಿಸು



ಈ ಅಳತೆ ಪಟ್ಟಿಯಲ್ಲಿನ ಮೊದಲ ಸಂಖ್ಯೆ ಯಾವುದು ?

ಈ ಅಳತೆಪಟ್ಟಿಯಲ್ಲಿನ ಕೊನೆಯ ಸಂಖ್ಯೆ ಯಾವುದು ?

ಈ ಅಳತೆ ಪಟ್ಟಿಯಲ್ಲಿ ಎಷ್ಟು ದೊಡ್ಡ ಗೆರೆಗಳಿವೆ ?


ಪ್ರತಿ ದೊಡ್ಡ ಗೆರೆಗಳ ನಡುವೆ ಎಷ್ಟು ಚಿಕ್ಕ ಗೆರೆಗಳಿವೆ ?

9 ಚಿಕ್ಕ ಗೆರೆಗಳು ಮತ್ತು ಒಂದು ದೊಡ್ಡ ಗೆರೆ ಸೇರಿ ಒಟ್ಟು 10 ಸಮಭಾಗಗಳ ಒಂದು ಗುಂಪಿಗೆ ಒಂದು ಸೆಂಟೀಮೀಟರ್ ಎನ್ನುತ್ತಾರೆ. ಬರೆಯುವಾಗ 1 ಸೆಂ.ಮೀ. ಎಂದು ಸಾಂಕೇತಿಕವಾಗಿ ಬರೆಯುತ್ತೇವೆ. ಈ ಒಂದು ಚಿಕ್ಕ ಅಳತೆ ಪಟ್ಟಿಯು ಒಟ್ಟು 15 ಸೆಂಟೀ ಮೀಟರ್ ಉದ್ದ ಇರುತ್ತದೆ.

ಈ ಅಳತೆ ಪಟ್ಟಿಯನ್ನು ಬಳಸಿ ನಾವು ಹಲವು ವಸ್ತುಗಳ ಉದ್ದವನ್ನು ಅಳೆಯಬಹುದು.

ಚಿತ್ರ ಗಮನಿಸಿ, ಅಳೆಯುವ ವಿಧಾನ ತಿಳಿದುಕೊ.

ಚಿತ್ರ ಗಮನಿಸಿ ಅಳೆಯುವ ವಿಧಾನ ತಿಳಿದುಕೋ.




©KTBS NOT TO BE REPUBLISHED

I. ಅಳತೆ ಪಟ್ಟಿಯಿಂದ ಈ ಕೆಳಗಿನ ಚಿತ್ರಗಳ ಉದ್ದವನ್ನು ಅಳೆದು ಖಾಲಿ ಜಾಗದಲ್ಲಿ ಬರೆ.











@KTBS NOT TO BE REPUBLISHED

ಅಭ್ಯಾಸ 10.1

ಈ ಕೆಳಗಿನ ವಸ್ತುಗಳ ಚಿತ್ರದ ಉದ್ದವನ್ನು ಸೆಂಮೀ ನಲ್ಲಿ ಅಳೆದು ಚೌಕದಲ್ಲಿ ಬರೆ.

1. 

2. 

3. 

4. 

5. 

© KTBS NOT TO BE REPUBLISHED

6. 

7. 

ಮೀಟರ್ ಅಳತೆ ಪಟ್ಟಿ


ನೀನು ಬಟ್ಟೆ ಅಂಗಡಿಯಲ್ಲಿ ಬಳಸುವ ಅಳತೆಪಟ್ಟಿಯನ್ನು ನೋಡಿದ್ದೀಯಲ್ಲವೇ ? ಅವರು ದೊಡ್ಡ ಅಳತೆಪಟ್ಟಿಯನ್ನು ಏಕೆ ಬಳಸುತ್ತಾರೆ ? ಯೋಚಿಸು.

ಹೆಚ್ಚು ಉದ್ದವಾದ ವಸ್ತುಗಳ ಅಳತೆಯನ್ನು ಮಾಡಲು ಚಿಕ್ಕ ಅಳತೆ ಪಟ್ಟಿಯು ಸೂಕ್ತವಲ್ಲ. ಏಕೆಂದರೆ ಇದರಿಂದ ಬೇಗ ಅಳತೆ ಮಾಡಲು ಆಗುವುದಿಲ್ಲ ಮತ್ತು ಹೆಚ್ಚು ಶ್ರಮವಾಗುತ್ತದೆ. ಆದ್ದರಿಂದ ದೊಡ್ಡ ಅಳತೆಯ ಪಟ್ಟಿಯನ್ನು ಬಳಸುತ್ತಾರೆ. ಇಂತಹ ದೊಡ್ಡ ಅಳತೆ ಪಟ್ಟಿಗೆ 'ಮೀಟರ್ ಅಳತೆ ಪಟ್ಟಿ ' ಎಂದು ಕರೆಯುತ್ತಾರೆ.

ಒಂದು ಮೀಟರ್ ಅಳತೆ ಪಟ್ಟಿಯು 100 ಸೆಂಟೀಮೀಟರ್ ಉದ್ದ ಇರುತ್ತದೆ. ಆದ್ದರಿಂದ

© KTBS NOT TO BE REPUBLISHED

1 ಮೀಟರ್ = 100 ಸೆಂಮೀ



ಈ ಕೆಳಗಿನ ಪಟ್ಟಿಯಲ್ಲಿನ ವಸ್ತುಗಳ ಅಳತೆಯನ್ನು ಮಾಡಲು ಸೂಕ್ತ ಅಳತೆಪಟ್ಟಿಯನ್ನು ನಿರ್ಧರಿಸಿ, ✓ ಗುರುತನ್ನು ಹಾಕು.

ಅಳತೆ	ಸೆಂಮೀ ಪಟ್ಟಿ	ಮೀಟರ್ ಪಟ್ಟಿ
ಪೆನ್ನಿನ ಉದ್ದ	✓	
ಕೊಠಡಿಯ ಉದ್ದ		
ಕ್ರಿಕೆಟ್ ಬ್ಯಾಟ್‌ನ ಉದ್ದ		
ಆಟದ ಮೈದಾನದ ಉದ್ದ		✓
ಬಾಗಿಲಿನ ಉದ್ದ		
ಪುಸ್ತಕದ ಉದ್ದ		
ಸೀರೆಯ ಉದ್ದ		
ರಬ್ಬರ್‌ನ ಉದ್ದ		
ಪೆನ್ಸಿಲ್‌ನ ಉದ್ದ		


@KTBS NOT TO BE REPUBLISHED

ಲಭ್ಯವಿದ್ದಲ್ಲಿ ನಿಜವಾದ ಮೀಟರ್ ಅಳತೆ ಪಟ್ಟಿ, ಇಲ್ಲವೇ ನೀನೇ ತಯಾರಿಸಿದ ಅಳತೆಪಟ್ಟಿ ಬಳಸಿ, ಈ ಕೆಳಗಿನ ಅಳತೆಗಳನ್ನು ಅಳೆದು ಬಿಟ್ಟ ಜಾಗದಲ್ಲಿ ಬರೆ.

* ತರಗತಿಯ ಕಪ್ಪು ಹಲಗೆಯ ಉದ್ದ
* ತರಗತಿಯಲ್ಲಿನ ಮೇಜಿನ ಉದ್ದ
* ಬೆಂಚ್ / ಡೆಸ್ಕ್‌ನ ಉದ್ದ
* ತರಗತಿಯ ಬಾಗಿಲಿನ ಅಗಲ
* ನೀನು ಕುಳಿತ ಸ್ಥಳದಿಂದ ಕಪ್ಪು ಹಲಗೆಯವರೆಗೆ ಇರುವ ದೂರ
* ಕೊಠಡಿಯ ಎರಡು ಗೋಡೆಗಳ ನಡುವಿನ ಅಂತರ

ಅಭ್ಯಾಸ 10.2

I. ಈ ಚಿತ್ರದಲ್ಲಿ ಪ್ರತಿಯೊಂದು ಬಣ್ಣದ ಪಟ್ಟಿಯ ಉದ್ದವನ್ನು ಸೂಕ್ತ ಅಳತೆ ಪಟ್ಟಿಯ ಸಹಾಯದಿಂದ ಅಳೆದು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.



ಬಣ್ಣದ ಪಟ್ಟಿ	ಉದ್ದ (ಸೆಂಮೀಗಳಲ್ಲಿ)
ಬಿಳಿ	
ನೀಲಿ	
ಹಸಿರು	
ಕೇಸರಿ	
ಕೆಂಪು	
ಹಳದಿ	


@KTBS NOT TO BE REPUBLISHED

* ಕೆಂಪು ಬಣ್ಣದ ಪಟ್ಟಿಗಿಂತ ಕಡಿಮೆ ಉದ್ದ ಇರುವ ಬಣ್ಣದ ಪಟ್ಟಿಗಳು ....., ..., ...
* ಅತಿ ಹೆಚ್ಚು ಉದ್ದದ ಬಣ್ಣದ ಪಟ್ಟಿ .....
* ಅತಿ ಕಡಿಮೆ ಉದ್ದದ ಬಣ್ಣದ ಪಟ್ಟಿ .....
* ನೀಲಿ ಮತ್ತು ಹಳದಿ ಬಣ್ಣದ ಪಟ್ಟಿಯ ಒಟ್ಟು ಉದ್ದ .....

* ಬಿಳಿ ಮತ್ತು ಹಳದಿ ಬಣ್ಣದ ಪಟ್ಟಿಯ ಉದ್ದಗಳ ವ್ಯತ್ಯಾಸ .....

* ಹಸಿರು ಬಣ್ಣದ ಪಟ್ಟಿಯು ನೀಲಿ ಬಣ್ಣದ ಪಟ್ಟಿಯ ಉದ್ದಕ್ಕೆ ಸಮವಾಗಬೇಕಾದರೆ ಸೇರಿಸಬೇಕಾದ ಅಳತೆ .....

II. **ಈ ಕೆಳಗಿನ ಚಿತ್ರದಲ್ಲಿನ ವಿವಿಧ ಬಾಹುಗಳ ಉದ್ದವನ್ನು ಅಳೆದು ಚಿತ್ರದಲ್ಲಿ ನಮೂದಿಸು.**



@KTBS NOT TO BE REPUBLISHED

III. **ನಿಮ್ಮ ತರಗತಿ ಕೊಠಡಿಯ ಉದ್ದ – ಅಗಲವನ್ನು ಅಳೆದು ಹತ್ತಿರದ ಮೀಟರ್‌ಗಳಲ್ಲಿ ಬರೆ.**

1) ಕೊಠಡಿಯ ಉದ್ದ .....

2) ಕೊಠಡಿಯ ಅಗಲ .....

